Personal explanation by Sri H.D. Deve Gowda, non.Member.—

ಛೇರ್ಮನ್. ಈಗ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ದೇವೇಗೌಡರು ವೈಯಕ್ತಿಕ ಹೇಳಿಕೆಯೊಂದನ್ನು ನೀಡುವರು.

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ ನಿಜಾಂಶವನ್ನು ಈ ಸದನಕ್ಕೆ ತಿಳಿಸುವ ಉದ್ದೇಶದಿಂದ ಒಂದು ವಿಷಯವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಮಾನ್ಯ ಭೀಮಣ್ಣ ಖಂಡ್ರೆಯವರು ಏನೇನು ಹೇಳಿದರೆಂಬುದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಭೀಮಣ್ಣ ಖಂಡ್ರೆ ಹಾಗೂ ಮಾನ್ಯ ವೀರಪ್ಪ ಮೊಯಿಲಿ ಇಬ್ಬರೂ ಸದನದಲ್ಲಿಲ್ಲ.

ಛೇರ್ಮನ್.—ದೇವೇಗೌಡರು.—ಹೇಳಿದ ಮಾತನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಭೀಮಣ್ಣ ಖಂಡ್ರೆಯವರು ಕೆಲವು ಮಾತುಗಳನ್ನು ಹೇಳಿರುವುದರ ಬಗ್ಗೆ ವಾಸ್ತವಾಂಶವನ್ನು ಸಭೆಯ ಗಮನಕ್ಕೆ ಶ್ರೀ ದೇವೇಗೌಡರು ತರುತ್ತಿದ್ದಾರೆ.

ಶ್ರೀ ಹೆಚ್ ಡಿ, ದೇವೇಗೌಡ.—ಮಾನ್ಯ ಅಜೀಜ್ ಸೇಠ್ ಅವರು ಹಕ್ಕುಚ್ಯುತಿ ನಿರ್ಣಯದ ಮೇಲೆ ಮಾತನಾಡುತ್ತಾ ಒಂದು ಆರೋಪ ಮಾಡಿದರು. ಅದೇನೆಂದರೆ,

"The hon'ble Member is speaking of misuse of lorry, etc. The very member is using Govt. bulding which was constructed for Govt. high shool purpose, whereas the Govt. high shool is being run in a rented building. He has been using the Govt. building since a very long time. Such being the case it shows the sincerity and honesty of the hon'ble Member Sri Bheemanna Khandre".

ಇದನ್ನು ನಾನು ಹೇಳಿದ್ದಿಂತದು ಈ ಸದನದಲ್ಲಿ ಮಾನ್ಯ ಸದಸ್ಯರು ಮಿಸ್‌ಕೋಟ್ ಮಾಡಿದರು. ನಾನು ಶಾಸಕನಾಗಿ ಹತ್ತೊಂಬತ್ತನೇ ವರ್ಷಕ್ಕೆ ಕಾಲಿಡುತ್ತಿದ್ದೇನೆ. ಯಾರ ಮೇಲೂ ಕೂಡ ವೈಯಕ್ತಿಕವಾಗಿ ಚಾರಿತ್ರ್ಯಹರಣ ಮಾಡುವ ಸ್ವಭಾವದವನಲ್ಲ ನಾನು. ವಿರೋಧ ಪಕ್ಷದ ನಾಯಕನಾಗಿ ಸರ್ಕಾರದ ದೋಷಗಳನ್ನು ಹೊರಗೆಳೆಯಲು ಪ್ರಯತ್ನಪಟ್ಟವನೇ ಹೊರತು ವೈಯಕ್ತಿಕವಾಗಿ ವ್ಯಕ್ತಿಹರಣ ಮಾಡಿದವನಲ್ಲ. ಮಾನ್ಯ ಅಜೀಜ್ ಸೇಠ್ ಅವರು ಮಾಡಿದ್ದ ಆಪಾದನೆಯನ್ನು ಸಭೆಯ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದನ್ನು ಮಾನ್ಯ ಸದಸ್ಯರು ಅನ್ಯಥಾ ತಪ್ಪು ಕಲ್ಪನೆ ಮಾಡಿಕೊಂಡು ಮಾತನಾಡಿದರು. ಆದುದ್ದರಿಂದ, ಅವರು ಅದನ್ನು ತಿದ್ದುಕೊಳ್ಳಬೇಕೆಂದು ಹೇಳುತ್ತೇನೆ.

ಛೇಮ್ಮನ್,—ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

Calling Attention to Matters of urgent Public Impertance

***re*:-Hardship caused to the ryots due to price Line in petroleum and other Fertiliser.**

ಶ್ರೀ ಎಸ್ ಬಂಗಾರಪ್ಪ —ಮಾನ್ಯ ಅಧ್ಯಕ್ಷರೇ, ನನ್ನ ಬಳಿ ಎರಡು ಹೇಳಿಕೆಗಳಿವೆ. ಒಂದು : ಹಾಸನ ಜಿಲ್ಲೆಗೆ ಸಂಬಂಧಿಸಿದ್ದು ಮತ್ತು ಎರಡನೆಯದು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು, ಇಡೀ ರಾಜ್ಯಕ್ಕೆ ಸಂಬಂಧಿಸಿದ ಹೇಳಿಕೆಯು ಹಾಸನ ಜಿಲ್ಲೆಗೂ ಅನ್ವಯಿಸುವುದರಿಂದ ನಾನು ಮೊದಲು ರಾಜ್ಯಕ್ಕೆ ಸಂಬಂಧಿಸಿದ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ನನ್ನ ಅಭ್ಯಂತರವಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಮಾನ್ಯ ಸಚಿವರು ಹೇಳಿಕೆ ಕೊಡಬಹುದು ; ನನ್ನದೇನೂ ಅಭ್ಯಂತರವಿಲ್ಲ. ಆದರೆ, ನಾನೂ ಕೂಡ ಈ ವಿಷಯದ ಬಗ್ಗೆ ಒಂದು ನೋಟೀಸನ್ನು ಕೊಟ್ಟಿದ್ದೇನೆ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಸ್ಕ್ಯಾಂ ಹೊಲಾಗುತ್ತಿರುವ

ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯವನ್ನು ಸೂಚಿಸಿ ನೋಟೀಸ್ ಕೊಟ್ಟಿದ್ದೇನೆ. ಇದರ ಬಗ್ಗೆ ಚರ್ಚೆ ಮಾಡಲು ಅಧ್ಯಕ್ಷರು ಯಾವ ರೀತಿಯ ಅನುಮತಿ ಕೊಡುತ್ತಾರೆ ಹಾಗೆ ಆಗಬಹುದು.

ಛೇರ್ಮನ್.—ಈಗ ಗಮನ ಸೆಳೆಯುವ ಸೂಚನೆಗೆ ಸಹಿ ಹಾಕಿರುವವರೆಲ್ಲ ಒಪ್ಪಿಕೊಂಡರೆ ಇದರ ಬಗ್ಗೆ ಎರಡೂವರೆ ಗಂಟೆಗಳ ಕಾಲದ ಚರ್ಚೆಗೆ ಅವಕಾಶ ಕೊಡಬಹುದು, ಇದರಲ್ಲಿ ನನ್ನದೇನೂ ಅಭ್ಯಂತರ ವಿಲ್ಲ.

ಶ್ರೀ ಪಿ. ರಾಮದೇವ್.—ಪೆಟ್ರೋಲಿಯಂ ವಸ್ತುಗಳ ಬೆಲೆ ಹೆಚ್ಚಾದ ಪರಿಣಾಮವಾಗಿ ಆರ್ಥಿಕ ರಂಗದ ಮೇಲೆ ದುಷ್ಪರಿಣಾಮ ಆಗಿರುವ ಬಗ್ಗೆ ಎರಡೂವರೆ ಗಂಟೆಗಳ ಕಾಲದ ಚರ್ಚೆಗೆ ಅವಕಾಶ ಕೊಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಹೆಚ್. ಡಿ. ದೇವೇಗೌಡ.—ಪೆಟ್ರೋಲಿಯಂ ವಸ್ತುಗಳ ಬೆಲೆ ಹೆಚ್ಚಾಗಿರುವುದರಿಂದಾಗುವ ದುಷ್ಪರಿಣಾಮ ಬೇರೆ ವಿಚಾರ. ಗೊಬ್ಬರದ ದಾಸ್ತಾನು ಎಷ್ಟಿತ್ತು, ಎಂಬುದನ್ನು ಮಾತ್ರ ಚರ್ಚೆ ಮಾಡ ಬೇಕಾಗುತ್ತದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಲ್ಲಿ ಎಷ್ಟು ದಾಸ್ತಾನಿತ್ತು ? ಮಾರ್ಕೆಟಿಂಗ್ ಫೆಡರೇಷನ್ನಿನಲ್ಲಿ ಎಷ್ಟು ದಾಸ್ತಾನಿತ್ತು ? ಮತ್ತು ವಿವಿಧ ಏಜನ್ಸಿಗಳಲ್ಲಿ ಎಷ್ಟು ದಾಸ್ತಾನಿತ್ತು ? ಎಂಬುದನ್ನೂ ಮತ್ತು ಗೊಬ್ಬರದಬೆಲೆ ಏರಿಸಿದ ಪರಿಣಾಮವಾಗಿ ಬರುವ ಹಣ ಯಾರಿಗೆ ಹೋಗುತ್ತದೆ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆಯೇ ? ಅಥವಾ ರಾಜ್ಯ ಸರ್ಕಾರಕ್ಕೆ ಬರುತ್ತದೆಯೇ ? ಅಥವಾ ಏಜನ್ಸಿಗೆ ಹೋಗುತ್ತದೆಯೇ ಎನ್ನುವುದನ್ನೆಲ್ಲ ಚರ್ಚೆ ಮಾಡುವುದಕ್ಕಾಗುತ್ತದೆ.

ಛೇರ್ಮನ್.—ಈಗ ಇರತಕ್ಕ ಗೊಬ್ಬರದ ದಾಸ್ತಾನು ಎಷ್ಟು ಮತ್ತು ಅದರ ಲಾಭ ಯಾರಿಗೆ ಹೋಗಂತ್ತದೆ ಎನ್ನುವ ಅಂಶ ತಾನೆ ತಮಗೆ ಬೇಕಾಗಿರುವುದು ? ಈ ವಿಚಾರದಲ್ಲಿ ಮಾನ್ಯ ಸಚಿವರು ಬೆಳಕು ಚೆಲ್ಲುತ್ತಾರೆ. Now, I request the Hon'ble Minister to make a statement with regard to the State. In the light of the statement he made if you find that there is necesisty to elaborate and discussion is necessary then this House may discuss.

SRI. B B. SAYANAK : MR. CHAIRMAN, I call the attention of the minister for Revenue and Agriculture to the hardship caused to the ryots due to the price hike in petroleum and fertilisers as also non-availability of fertilisers.

SRI S, BANGARAPPA (Minister for Revenue & Agriculture).—Sir, I wish to make the following :

Government shares the concern of the members at the hardship faced by the farming community of the State, as a result of the hike in fertiliser prices. However, as is only too well-known to all of us, the Government of India have been forced to raise the prices of fertilisers for reasons totally beyond the control, of the national economy and the Government. Indeed, all over the World, Government and manufacturers have had to increase fertiliser prices because of the steep rise in the prices of oil and naphtha and, apart from the crude oil surplus countries and some of the countries in the Socialist block indeed no country has been able to avoid this phenomona. Insofar as the provision of financial relief to the farmers is concerned, this is a matter in which, obviously, a national consensus has to emerge and we shall pursue this with the Government of India and

see how best the situation can be tackled. However, Government is already seized of the matter and is examining the several aspects of the matter.

Insofar as fertiliser stocks are concerned, the availability in the State is certainly satisfactory and is much more than at any time in the past. As on 1-6-1980, 96,407 tonnes of fertiliser were available in stock in Karnataka as between the Government, the Co-operative and the private agencies. The districtwise figures of fertiliser stocks in the State as on 1-6-80 are appended. It is not unlikely that the demand for fertilisers may be affected somewhat by the increase in fertiliser prices. Insofar as stocks of various fertiliser items are concerned, except for ammonium sulphate, it could be said that fertiliser stocks in the State and in the pipeline are sufficient to meet the actual demand.

As Ammonium sulphate is an imported fertiliser and is allotted to the State by Government of India, the quantity of Ammonium sulphate available is restricted to the quantity allotted by Government of India. We have asked Government of India to allot us 10,000 tonnes of Ammonium sulphate. To some extent, complexes such as 17: 17: 17, 19: 19: 19 and 10: 26: 26 are also in short supply because of difficulties in transporting these complex fertilisers into Karnataka due to non-availability of railway wagons for this purpose. However, there are adequate stocks of Diammonium Phosphate, Urea, Calcium Ammonium Nitrate, Muriate of Potash and single super phosphate in the State at present, and a combination of these fertilisers can be utilised in places of complex fertilisers.

Regarding the sale of fertilisers, as per Government of India telegram dated 8-6-80, the Karnataka Agro Industries Corporation and Marketing Federation suspended their sale of fertilisers for a limited period pending the announcement of revised prices by Government of India. The Government of India have since communicated the revised prices and both the institutional agencies have since commenced sales. The sale of Ammonium Sulphate and CAN has been suspended pending revision of prices by Government of India and as per the directions contained in their telegram dated 8-6-1980, Government of India have been requested to permit us to resume the sale of these two items also without further delay.

A Cell has been set up in the Directorate of Agriculture under the chairmanship of Joint Director of Agriculture (Quality Control) to review and monitor every day the fertiliser position in the State. It

is felt that these arrangements are likely to be sufficient to deal with day-to-day matters and avoid hardship to the farming community in this respect.

Districtwise Stock Position of Fertilisers in Karnataka as on 1-6-1980 (In metric tonnes)

Sl. No.	District	Stock
1	2	3
1	Bangalore	5891
2	Kolar	5085
3	Tumkur	2889
4	Mysore	4732
5	Mandya	7470
6	Kodagu	953
7	Shimoga	6021
8	Chitradurga	7317
9	Chickmagalur	2034
10	Hassan	3265
11	Dakshina Kannada	3379
12	Dharwad	8857
13	Bellary	8803
14	Raichur	12860
15	Belgaum	7574
16	Bijapur	3656
17	Gulbarga	2536
18	Bidar	2277
19	Uttara Kannada	775
	Total ...	96407 MTs

ಶ್ರೀ ಆಂದಾನಯ್ಯ.— ರಾಸಾಯನಿಕ ಗೊಬ್ಬರಗಳನ್ನು ಕೆಲವು ಖಾಸಗಿ ಏಜನ್ಸಿಗಳು ಸಹಕಾರಿ ಸಂಸ್ಥೆಗಳು ಡೀಲ್ ಮಾಡುತ್ತಿದ್ದವೆಂದು ತಿಳಿಸಿದ್ದೀರಿ. ಬೆಲೆ ಏರಿಕೆಯಾದ ದಿನದಿಂದ ಸರ್ಕಾರದವರು ಸ್ಟಾಕ್ ಇದ್ದಂತೆ ರಾಸಾಯನಿಕ ಗೊಬ್ಬರವನ್ನು ಹಿಂದಿನ ಬೆಲೆಯಲ್ಲಿಯೇ ಮಾರಾಟ ಮಾಡುವಂತೆ ಡೈರೆಕ್ಷನ್ ಏನಾದರೂ ಕೊಟ್ಟಿದ್ದಾರೆಯೆ?

ಶ್ರೀ ಕೆ.ಹೆಚ್. ಹನುಮೇಗೌಡ.— ಗೊಬ್ಬರದ ಬೆಲೆ ೬೦೦ ರೂಪಾಯಿ ೮೦೦ ರೂಪಾಯಿ ಜಾಸ್ತಿಯಾಗಿದೆ. ರೈತರು ಕೊಂಡು ಬೆಳೆಗಳಿಗೆ ಹಾಕತಕ್ಕಂಥ ಸ್ಥಿತಿಯಲ್ಲಿ ಇಂದು ಇಲ್ಲ. ರೈತರು ಹೆಚ್ಚಾಗಿ ಬೆಳೆಯತಕ್ಕ ರಾಗಿ, ಬತ್ತ ಮತ್ತು ಜೋಳಕ್ಕೆ ಲೆವಿ ಬೆಲೆಯನ್ನು ಗೊತ್ತು ಮಾಡಿದ್ದೀರಿ. ಹಿಂದೆ ಇದ್ದಂತ ಗೊಬ್ಬರ ಬೆಲೆಗೆ ಇನ್‌ಸಿಸ್ಟ್ ಮಾಡುವುದಾದರೆ ರಾಗಿ, ಬತ್ತ ಜೋಳವನ್ನು ಬೆಳೆಯತಕ್ಕ ರೈತರು ಸಂಪೂರ್ಣವಾಗಿ ನಿರ್ನಾಮ ಹೊಂದುತ್ತಾರೆ. ತಾವು ಈ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೀರಾ?

ಎರಡನೆಯದಾಗಿ ಇಂತಿಂಥ ಜಿಲ್ಲೆಯಲ್ಲಿ ಇಷ್ಟಿಷ್ಟು ಸ್ಟಾಕ್ ಇತ್ತು ಎಂದು ತಿಳಿಸಿದ್ದೀರಿ. ಮುಂಗಾರು ಮಳೆ ಈಗಾಗಲೇ ಪ್ರಾರಂಭವಾಗಿದೆ. ಮೈಸೂರು, ಹಾಸನ ಕಡೂರು ಶಿವಮೊಗ್ಗ ಜಿಲ್ಲೆಗಳಲ್ಲಿ ತಾವು ಹೇಳಿದಂತೆ ಗೊಬ್ಬರ ಸ್ಟಾಕ್ ಮಾಡಿಲ್ಲ. ಬಿತ್ತನೆ ಮಾಡುವುದಕ್ಕೆ ಇನ್ನು ೨೦ ದಿವಸ ಒಂದು ತಿಂಗಳು ಇದ್ದಂಗೆ ರೈತರು ಗೊಬ್ಬರಕ್ಕಾಗಿ ಬಹಳ ತೊಂದರೆಪಟ್ಟಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ, ಹೋಗಲಾಡಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

Sri. B. B, SAYANAK.— Sir may I know whether the Central Government has taken our State Government into confidence while increasing the price of Fertilizers, If not, will the State Government explain the hardship caused to the agricultural community and request the Central Government to reduce the price of the fertilizers?

ಶ್ರೀ ಎಸ್. ಎಸ್. ಅರಕೇರಿ.— ಸ್ವಾಮಿ, ಹರಿಜನ ಗಿರಿಜನ ರೈತರಿಗೆ ಸಬ್ಸೀಡಿ ದರದಲ್ಲಿ ಗೊಬ್ಬರಗಳನ್ನು ಕೊಡುವಂತ ಸ್ಕೀಮು ಇದೆಯೆ? ವ್ಯವಸಾಯ ಇಲಾಖೆಯ ನಿರ್ದೇಶಕರು ಇದರ ಬಗ್ಗೆ ಏನಾದರೂ ಪಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆಯೆ? ಇದರ ಬಗ್ಗೆ ಸರ್ಕಾರದ ನಿಲುವು ಏನೆಂಬುದನ್ನು ತಿಳಿಸುತ್ತೀರಾ?

ಶ್ರೀ ಹೆಚ್. ಡಿ ದೇವೇಗೌಡ.— ಅಧ್ಯಕ್ಷರೆ, ನೆನ್ನೆಯ ದಿವಸ ಮುಖ್ಯಮಂತ್ರಿಗಳು ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತಿದ್ದಾಗ ಚರ್ಚೆ ಮಾಡತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳಿದರು. ಪೆಟ್ರೋಲ್ ರೇಟ್ ಹೆಚ್ಚು ಮಾಡಿದ ವರ್ತಮಾನ ಬಂದಮೇಲೆ ಧಾರವಾಡ ಜಿಲ್ಲಾ ಜಿಲ್ಲಾಧಿಕಾರಿಗಳವರು ಪ್ರತಿಯೊಂದು ಪೆಟ್ರೋಲ್ ಬಂಕ್‌ಗೆ ಹೋಗಿ ಅಲ್ಲಿ ಸ್ಟಾಕ್ ಲೆಕ್ಕತೆಗೆಸಿ ಇದ್ದಂತಹ ಪೆಟ್ರೋಲನು ಹಳೆಯ ದರಕ್ಕೆ ಮಾರತಕ್ಕ ಒಂದು ನಿರ್ಣಯ ಮಾಡಿದ್ದಾರೆಂದು ತಿಳಿಸಿದರು. ಜಿಲ್ಲಾಧಿಕಾರಿಗಳವರ ನಿರ್ಣಯದ ಬಗ್ಗೆ ವಿಜಕ್ಕೂ ಒಪ್ಪಿಕೊಳ್ಳಬೇಕು. ಆದೇರೀತಿ ಈ ಫರ್ಟಿಲೈಜರ್ ಸ್ಟಾಕ್ ಖಾಸಗಿ ಅವರ ಹತ್ತಿರ ಇರಲಿ, ಇನ್ಸ್‌ಟಿಟ್ಯೂಷನ್ ಏಜೆನ್ಸಿ ಹತ್ತಿರ ಇರಲಿ, ಎಲ್ಲೇ ಇರಲಿ ಈ ಒಂದು ಹಳೆಯ ಸ್ಟಾಕ್ ಏನಿದೆ ಅದನ್ನು ರೈತರಿಗೆ ಹಿಂದಿನ ರೇಟಿಗೆ ಹಂಚುವ ವ್ಯವಸ್ಥೆಯನ್ನು ಸರ್ಕಾರ ಮಾಡತಕ್ಕಂತಾದ್ದಕ್ಕೆ ಏನಾದರೂ ಪ್ರಯತ್ನ ನಡೆಸಿಹೆಯೇ? ಈಗ ಆಯಾಯ ಜಿಲ್ಲಾಧಿಕಾರಿಗಳು ಇರತಕ್ಕ ಸ್ಟಾಕ್ ಹೇಳಿದ್ದಾರೆ, ತಾವು ಅಧಿಕಾರಿಗಳನು ಕರೆದು ಇಡೀ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಸ್ಟಾಕ್ ಇದೆ ಎಂದು ತಿಳಿದು ನಮ್ಮ ಮುಂದೆ ಪರದಿಯನ್ನು ಇಟ್ಟಿದ್ದೀರಿ. ಈ ಬೆಲೆಯನ್ನು ಹೆಚ್ಚಿಸಿದಂತ ಸನ್ನಿವೇಶದಲ್ಲಿ ಪ್ರತಿಯೊಂದು ಏಜೆನ್ಸಿಯಲ್ಲೂ, ಖಾಸಗಿ ಅವರದು, ಆಗ್ರೋ ಇಂಡಸ್ಟ್ರೀಸ್, ಕೋ ಆಪರೇಟೀವ್ ಇನ್ಸ್‌ಟಿಟ್ಯೂಷನ್ ಇರಬಹುದು ಸ್ಟಾಕ್ ವೆರಿಫೈ ಮಾಡಿ ತೆಗೆದುಕೊಂಡರೆ I want to know, as that particular date what was the stock position in these three categories of agencies? ಅದನ್ನು ಮಾಡಿದ್ದೀರಾ? ಇವೊತ್ತು ಇರುವುದನ್ನು ಲೆಕ್ಕ ತರಿಸಿ ಮುಂದಕ್ಕೆ ವಿತರಣೆ ಮಾಡುವ ವ್ಯವಸ್ಥೆಯಲ್ಲಿ ಅರ್ಥ ಇಲ್ಲ. ಆ ಒಂದು ಪರ್‌ಟಿಕ್ಯುಲರ್ ಡೇಟ್‌ಗೆ ಸ್ಟಾಕ್ ಎಷ್ಟು ಇತ್ತು, ಅದರ ಬಗ್ಗೆ ಸರ್ಕಾರದ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆಯೇ? ಇನ್ನು ಹಾಲಿ ಇದ್ದಂತಹ ಸ್ಟಾಕನ್ನು ಹಳೆಯ ರೇಟಿಗೆ ಪೂರುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ವಿ. ಕಕ್ಕಲಾಯ.— ಅಧ್ಯಕ್ಷರೆ, ಇವೊತ್ತು ಮುಖ್ಯವಾದ ಪ್ರಶ್ನೆ ಏನು ಅಂದರೆ ಈ ಫರ್ಟಿಲೈಜರ್ಸ್ ಸ್ಟಾಕ್ ಎಷ್ಟು ಇದೆ ಎಂದು, ಈ ದಿವಸ ಬೆಲೆ ಏರಿದಾಗ ಆದರಲ್ಲಿ ಎಷ್ಟು ಸ್ಟಾಕ್ ಇದೆ ಅಂತ ತಮ್ಮ ಗಮನಕ್ಕೆ ಬಂದಿದೆ. ಈಗ ಪ್ರೈವೇಟ್‌ನವರ ಕಡೆ ಸ್ವಲ್ಪ ಇರುವುದರಿಂದ ಅವರು ಅದನ್ನು ಅಡಗಿಸಿಟ್ಟುಕೊಂಡು ಹೆಚ್ಚು ಬೆಲೆಯಲ್ಲಿ ಮಾರಲಿಕ್ಕೆ ಸಾಧ್ಯ ಇದೆ ಹಿಂದೆ ಇದ್ದ ಸ್ಟಾಕ್ ಬೆಲೆಯನ್ನು ಏರಿಸಿದರೆ ಏನು ಮಾಡುತ್ತೀರಾ? ಬೆಲೆ ಏರಿಕೆಗೆ ಮುಖ್ಯ ಕಾರಣ ಆಯಿಲ್ ಮತ್ತು ನ್ಯಾಫ್ತ ಬೆಲೆ ಏರಿದೆ. ಇದು ತಮ್ಮ ನಿಯಂತ್ರಣಕ್ಕೆ ಮೀರಿದೆ ಎಂದು ಹೇಳಿಕೊಂಡಿದ್ದೀರಿ. ಬೇರೆ ದೇಶದ ಜೊತೆಯಲ್ಲಿ ವ್ಯವಹಾರ ಮಾಡಿ ತರಿಸಿಕೊಳ್ಳಲಿಕ್ಕೆ ಕೇಂದ್ರ ಸರ್ಕಾರ ಪ್ರಯತ್ನ ಮಾಡುತ್ತಿದೆ. ಆದರೆ ಅವರು ಎಷ್ಟಕ್ಕೆ ತೆಗೆದುಕೊಳ್ಳುತ್ತಾರೆ ಅದರ ಮೂರು ಪಟ್ಟು ಇಲ್ಲಿ ಎಕ್ಸೈಜ್ ಟ್ಯಾಕ್ಸ್ ಹಾಕುತ್ತೀರಿ. ಅವರು ಅಲ್ಲಿ ಒಂದು ಲೀಟರ್‌ಗೆ ಒಂದು ರೂಪಾಯಿ ಜಾಸ್ತಿ ಮಾಡಿದರೆ ತಾವು ಅದರ ಮೇಲೆ ಟ್ಯಾಕ್ಸ್ ಹಾಕಿ ನಾಲ್ಕು ರೂಪಾಯಿಗೆ ಮಾರುತ್ತೀರಿ. ಈಗ ತಾವು ಕೇಂದ್ರ ಸರ್ಕಾರದ ಹೊಣೆ ಅಂತ ಹೇಳುವುದಾದರೆ, ಇದನ್ನು ಏನಾದರೂ ಪುನರ್‌ಪರಿಶೀಲನೆ ಮಾಡಲಿಕ್ಕೆ ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳುತ್ತೀರಾ? ಹಾಗೆತಮ್ಮ ನಿಯಂತ್ರಣದಲ್ಲಿರುವ ಅಂಶ ಅಂದರೆ ಎಕ್ಸೈಜ್ ಡ್ಯೂಟಿ ಹಾಕಿ ಬೆಲೆ ಏರಿಸುವುದನ್ನು ತಡೆಯಲಿಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ? ಇನ್ನು ಮೂರನೆಯದು ಅಂದರೆ ಈ ಡೀಸೆಲ್, ಪೆಟ್ರೋಲ್ ತರಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ. ಹಾಗೆ ಈ ನ್ಯಾಫ್ತ ಬಗ್ಗೆ, ಎಲ್ಲಿ ದೊರೆಯುತ್ತದೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದಕ್ಕೆ ಏನಾದರೂ ಪ್ರಯತ್ನ ಮಾಡಿ ಜಾಸ್ತಿ ತರಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ? ಫರ್ಟಿಲೈಸರ್ ಮಾಡಲಿಕ್ಕೆ ನ್ಯಾಫ್ತ್ ಬೇಸ್ ಆಗಿರುವುದರಿಂದ ಫ್ಯಾಕ್ಟರಿಗಳಲ್ಲಿ ಉತ್ಪಾದನೆ ಸ್ಥಗಿತವಾಗಬಹುದು ಅಂತ ತಜ್ಞರು ಹೇಳಿದ್ದಾರೆ. ಇವೊತ್ತು ಫ್ಯಾಕ್ಟರಿಗಳು ಮುಚ್ಚುತ್ತಿವೆ ಅಂತ ಎಕನಾಮಿಕ್ ಸರ್ವೆಯರ್ ಪಾರ್ಲಿಮೆಂಟಿನಲ್ಲಿ ಕೊಟ್ಟಿದ್ದಾರೆ. ಫ್ಯಾಕ್ಟರಿಯಲ್ಲಿ ಫರ್ಟಿಲೈಜರ್ಸ್ ಉತ್ಪಾದನೆ ಕಡಿಮೆಯಾಗುತ್ತಿದೆ. ಇದನ್ನು ಪರಿಹರಿಸಲಿಕ್ಕೆ ಕೇಂದ್ರ ಸರ್ಕಾರದ ಗಮನಕ್ಕೆ ತಂದು ಈ ಪ್ರೊಡಕ್ಷನ್ ವಿಧಾನವನ್ನು ಬದಲಾವಣೆ ಮಾಡಬಹುದು. ಕೊನೆಯದಾಗಿ ಈ ಥ್ರೀ ಟೈರ್ ಸಿಸ್ಟಮ್ ತಂದು ಫರ್ಟಿಲೈಜರ್ಸ್ ಮಾರಾಟ ಮಾಡುವುದರಲ್ಲಿ, ಕೋ ಆಪರೇಟೀವ್‌ಗೆ ಬರುವಾಗ ಹೀಗೆ ಮೂರು ಹಂತದಲ್ಲಿ ಲಾಭ ಸೇರಿಸುತ್ತೀರಿ. ರೈತರಿಗೆ ಸಿಕ್ಕುವಷ್ಟರಲ್ಲಿ ಮೂರು ಹಂತದಲ್ಲಿ ವಿತರಣೆಯಾಗಿ ಬರುವಾಗ ಬೆಲೆ ಜಾಸ್ತಿಯಾಗುತ್ತದೆ. ಆದನ್ನು ಕಡಿಮೆ ಮಾಡಿ ವಿತರಣೆ ವ್ಯವಸ್ಥೆಯಲ್ಲಿ ಸ್ಟೀಮ್ ಲೈನ್ ಮಾಡುತ್ತೀರಾ? ನೇರವಾಗಿ ತಮ್ಮ ಸ್ವಾಧೀನದಲ್ಲಿರುವ ಡಿಪಾರ್ಟ್‌ಮೆಂಟ್ ಮೂಲಕ ಅಥವಾ ಕೋ ಆಪರೇಟೀವ್ ಮೂಲಕ ಯಾವುದೋ ಒಂದು ಏಜೆನ್ಸಿ ಮೂಲಕ ವಿತರಣೆಯಾಗುವಂತೆ ಮಾಡಿ ಮಧ್ಯದಲ್ಲಿ ತೆಗೆದುಕೊಳ್ಳತಕ್ಕಂಥ ಲಾಭದ ಅಂಶವನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ? ಈ ಬೆಲೆ ಏರಿಕೆ ಕಡಿಮೆ ಮಾಡಲಿಕ್ಕೆ ಏನಾದರೂ ಒಂದು ಯೋಜನೆ ತಯಾರು ಮಾಡಿದ್ದಾರೆ ಮಾನ್ಯ ಮಂತ್ರಿಗಳು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.— ಅಧ್ಯಕ್ಷರೆ, ರಾಜ್ಯದ ವ್ಯಾಪ್ತಿಯೊಳಗೆ ಇರತಕ್ಕ ಸಮಸ್ಯೆಗಳನ್ನು ಮಾತ್ರ ಕೇಳಲಿಕ್ಕೆ ಇಷ್ಟಪಡುತ್ತೇನೆ. ಈಗ ವಿದೇಶಗಳಿಂದ ವ್ಯವಹಾರ ಮಾಡಿ ತರಿಸಿಕೊಳ್ಳುವುದು ಮಾನ್ಯ ಮಂತ್ರಿಗಳ ಕೈಯಲ್ಲಿ ಇಲ್ಲ. ಈಗ ಇವರ ಕೈಯಲ್ಲಿ ಏನು ಇದೆ ಅದನ್ನು ಮಾತ್ರ ಕೇಳಬೇಕಾಗಿದೆ. ಇವೊತ್ತು ಗೊಬ್ಬರ ಏನಿದೆ ಅದು ರಾಜ್ಯದ ಬೇಡಿಕೆಗೆ ಎಷ್ಟು ಭಾಗ ಸಾಕಾಗುತ್ತದೆ. ಏಕೆಂದರೆ ಬೇರೆ ಖಾಸಗಿ ಜನರ ಮೇಲೆ ಇವರ ನಿಯಂತ್ರಣ ಇಲ್ಲ. ಒಟ್ಟು ಬೇಡಿಕೆಗೆ ನಲವತ್ತು ಭಾಗ ಇವರ ಹತ್ತಿರ ಇದ್ದರೆ ರೈತರು ಅದರ ಪ್ರಯೋಜನ ಪಡೆಯುವುದು ಕಷ್ಟವಾಗುತ್ತದೆ. ಮಧ್ಯವರ್ತಿಗಳು ಪ್ರಯೋಜನ ಪಡೆದುಕೊಳ್ಳುತ್ತಾರೆ. ಆದುದರಿಂದ ತಮ್ಮಲ್ಲಿರತಕ್ಕಂತಹ ಸ್ಟಾಕ್ ಈ ವರ್ಷಕ್ಕೆ ಸಾಕಾಗುವಷ್ಟು ಇದೆಯೇ? ತಮ್ಮಲ್ಲಿ ಅಷ್ಟು ಸ್ಟಾಕ್ ಇದ್ದರೆ ನೇರವಾಗಿ ಮಧ್ಯವರ್ತಿಗಳಿಂದ ತಪ್ಪಿಸಿ ರೈತರಿಗೆ ತಲುಪಿಸುವಂತೆ ವ್ಯವಸ್ಥೆ ಮಾಡುತ್ತೀರಾ? ತಾವು ಇಷ್ಟೆಲ್ಲಾ ಮಾಡಿದರು ತಮ್ಮ ಕಡೆ ಗೊಬ್ಬರ ಸಿಕ್ಕದೇ ಹೋದರು ಅವರು ಬೇರೆ ಕಡೆ ತಂದು ಬೆಳೆಯನ್ನು ಬೆಳೆಯುತ್ತಾರೆ. ಸರ್ಕಾರವನ್ನೇ ನಂಬಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಅವರು ಬೆಳೆದಂಥಬೆಳೆಗೆ ಜಾಸ್ತಿ ಬೆಲೆ ಕೊಡುವಂತೆ ಆರ್ಡರ್ ಮಾಡಿ. ಏಕೆಂದರೆ ಈಗ ತಾವು ರಾಗಿ, ಕಬ್ಬು ಜೋಳ ಇಂತಾದ್ದಕ್ಕೆ ಇಷ್ಟು ಅಂತ ಒಂದು ಬೆಲೆ ನಿಗದಿ ಮಾಡಿದರೆ ಸರಿಯಾಗುತ್ತದೆ. ಇವೊತ್ತು ಗೊಬ್ಬರದ ಬೆಲೆ ಜಾಸ್ತಿಯಾಗಿರುವುದಕ್ಕೆ ಅಂತರರಾಷ್ಟ್ರೀಯ ಕಾರಣ ಕೊಟ್ಟಿದ್ದೀರಾ. ಅದೇ ರೀತಿ ರೈತರು ಬೆಳೆದ ಬೆಳೆಗೆ ಜಾಸ್ತಿ ಬೆಲೆ ಮಾಡಲಿಕ್ಕೆ ಸಾಧ್ಯ ಇದೆ, ಅದನ್ನು ಮಾಡುತ್ತೀರಾ ಮಾನ್ಯ ಮಂತ್ರಿಗಳು ಇದರ ಬಗ್ಗೆ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರ್. — ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಸ್ನೇಹಿತರು ಸಾಕಷ್ಟು ವಿಚಾರಗಳನ್ನು ತಿಳಿಸಿದ್ದಾರೆ. ರೈತರ ಜೀವನ ಮತ್ತು ಅವರ ಕಸುಬಾದ ಕೃಷಿ ವಿಚಾರದಲ್ಲಿ ರಾಜ್ಯ ಸರ್ಕಾರವಾಗಲೀ ಅಥವಾ ಕೇಂದ್ರ ಸರ್ಕಾರವಾಗಲೀ ಅಷ್ಟಾಗಿ ಗಮನ ಕೊಡುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಕೆಲವು ವಿಚಾರಗಳನ್ನು ತಿಳಿದುಕೊಂಡು ಬರಲು ನಾನೊಂದು ಪಳ್ಳಿಯ ಸಂಘಕ್ಕೆ ಹೋಗಿದ್ದೆ. ಅಲ್ಲಿ ಹೇಳಿದ ಪ್ರಕಾರ ಗೊಬ್ಬರದ ಬೆಲೆ ಸುಮಾರು ೀಕಡಲಿ೦–೫೦ರಷ್ಟು ಏರಿದೆ. ಮಾನ್ಯ ಜೆ ಹೆಚ್. ಪಟೇಲರು ಹೇಳಿದ ಹಾಗೆ ಇದಕ್ಕೆ ಪರ್ಯಾಯವಾಗಿ ರೈತರು ಬೆಳೆಯತಕ್ಕ ಪದಾರ್ಥಗಳಿಗೆ ಬೆಂಬಲ ಬೆಲೆಯನ್ನು ಕೊಡುವುದಕ್ಕೆ ಸರ್ಕಾರದವರು ಸಿದ್ಧರಿವ್ದಾರೆಯೆ? ಇಲ್ಲ ಏಕೆಂದರೆ, ಪೆಟ್ರೋಲಿಯಂ ಪದಾರ್ಥಗಳ ಬೆಲೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿರುವುದರಿಂದಾಗಿ ಇದರ ಬೆಲೆಯನ್ನು ಏರಿಸಲಾಗಿದೆ ಎಂದು ಕಾರಣ ಹೇಳುತ್ತಾರೆ. ಆದರೆ, ಅದೇ ಅಂತರರಾಷ್ಟ್ರೀಯ ವಿಚಾರ ತೆಗೆದುಕೊಂಡು, ಬೇರೆ ದೇಶಗಳವರು ರೈತರು ಬೆಳೆಯುತಕ್ಕ ಪದಾರ್ಥಗಳಿಗೆ ಬೆಲೆಯನ್ನು ಯಾವ ರೀತಿ ನಿಗದಿ ಮಾಡಿದ್ದಾರೆನ್ನುವುದನ್ನು ತಿಳಿಸುವುದಕ್ಕೆ ಸರ್ಕಾರ ಸಿದ್ಧವಿಲ್ಲ. ಜಪಾನಿನಲ್ಲಿ ರೈತ ಬೆಳೆಯುವ ಭತ್ತವನ್ನು ಅಲ್ಲಿನ ಸರ್ಕಾರ ಅಂತರರಾಷ್ಟ್ರೀಯ ಬೆಲೆಯ ಮುನ್ನೂರು ಪಟ್ಟು ಹೆಚ್ಚು ಹಣ ಕೊಟ್ಟು ಕೊಂಡುಕೊಳ್ಳುತ್ತದೆ. ಇದರ ಬಗ್ಗೆ ಆರ್ಥಿಕ ತಜ್ಞರು ಮತ್ತು ಆರ್ಥಿಕ ಸಲಹೆಗಾರರು, ಮುನ್ನೂರು ಪಟ್ಟು ಹೆಚ್ಚು ಹಣ ಕೊಟ್ಟು ಏತಕ್ಕೆ ತೆಗೆದುಕೊಳ್ಳುತ್ತಿದ್ದೀರಿ, ಬಹಿರಂಗ ಮಾರುಕಟ್ಟೆಯಲ್ಲಿ ಅದಕ್ಕಿಂತಲೂ ಕಡಮೆ ಹಣದಲ್ಲಿ ಭತ್ತ ಸಿಗುತ್ತಿರುವಾಗ ಅದನ್ನೇತಕ್ಕೆ ನೀವು ಕೊಂಡುಕೊಳ್ಳಬಾರದು ಎಂದು ಅಲ್ಲಿನ ಸರ್ಕಾರವನ್ನು ಕೇಳಿದಾಗ, ರೈತರು ನಮ್ಮ ದೇಶದ ಜೀವನಾಡಿ ಎಂದು ಅಲ್ಲಿನ ಸರ್ಕಾರದವರು ಹೇಳಿದ್ದಾರೆ. ಅಲ್ಲದೆ, ರೈತರಿಗೆ ಕೊಡತಕ್ಕ ಬೆಲೆ ವಿಚಾರದಲ್ಲಿ ಸರ್ಕಾರಕ್ಕೆ ಎಷ್ಟೇ ಕಷ್ಟ ಬಂದರೂ ಸಹ ಕೊಡುವುದಕ್ಕೆ ಸಿದ್ಧರಾಗಿದ್ದೇವೆ, ಮುನ್ನೂರು ಪಟ್ಟಲ್ಲ ಸಾವಿರ ಪಟ್ಟು ಹೆಚ್ಚು ಕೊಡುವುದಕ್ಕೆ ಸಿದ್ಧರಾಗಿದ್ದೇವೆ ಎಂದೂ ಹೇಳಿದ್ದಾರೆ.

ಛೇರ್ಮನ್. — ಮಾನ್ಯ ಸದಸ್ಯರ ವೇದನೆ ಮತ್ತವರ ಭಾವನೆ ನನಗೆ ಅರ್ಥವಾಗುತ್ತಿದೆ. ಆದರೆ, ನಿಯಮದ ಪ್ರಕಾರ ತಾವು ವಿವರಣೆ ಮಾತ್ರ ಕೇಳಬೇಕು.

ಶ್ರೀ ಎಸ್. ಬಂಗಾರಪ್ಪ. — ಸ್ವಾಮಿ, ರೈತರು ಬೆಳೆಯತಕ್ಕ ಮಾಲುಗಳಿಗೆ ಯೋಗ್ಯ ಬೆಲೆ ನಿಗದಿ ಮಾಡಬೇಕು, ಅವರ ಜೀವನ ಲಾಭದಾಯಕವಾಗಿದೆಯೇ ಅಥವಾ ನಷ್ಟದಲ್ಲಿದೆಯೇ ಎಂಬುದನ್ನೆಲ್ಲಾ ಚರ್ಚೆ ಮಾಡಬೇಕಾದ ವಿಷಯ. ಆದರೆ, ಅದನ್ನು ಈ ಗಮನ ಸೆಳೆಯುವ ಸೂಚನೆಯಡಿಯಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ಅದಕ್ಕೊಂದು ಪ್ರತ್ಯೇಕ ಕಾಲವನ್ನೇ ನಿಗದಿ ಮಾಡಿದರೆ ಅದಕ್ಕೆ ನನ್ನದೇನೂ ಆಭ್ಯಂತರ ವಿಲ್ಲ. ರೈತರಿಗೆ ಯೋಗ್ಯ ಬೆಲೆ ಕೊಡುವ ವಿಚಾರಕ್ಕೆ ಸಂಬಂಧಿಸಿದಂತೆ ಸದ್ಯದಲ್ಲಿ ನನ್ನ ಬಳಿ ವರದಿ ಅಥವಾ ಮಾಹಿತಿಗಳಿಲ್ಲ. ಆದುದರಿಂದ, ಆ ವಿಷಯ ಈಗ ಬೇಡ. ಗಮನ ಸೆಳೆಯುವ ಸೂಚನೆಯ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಯನ್ನು ಸೀಮಿತಗೊಳಿಸಬೇಕೆಂದು ಪ್ರಾರ್ಥನೆ.

ಶ್ರೀ ಎಂ. ವಿ. ರಾಜಶೇಖರನ್. — ಮಾನ್ಯ ಸಚಿವರು ಬಹಳ ಸೂಕ್ಷ್ಮವಾದ ಬುದ್ಧಿಯುಳ್ಳವರೆಂದು ನನಗೆ ಗೊತ್ತು. ಈ ವಿಚಾರವನ್ನು ಮುಂದಿಟ್ಟು ಅವರು ಜಾರಿಕೊಳ್ಳುವುದಾದರೆ ನಾನದನ್ನು ವಿರೋಧಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ. — ನಾನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ. ಚರ್ಚೆ ಮಾಡುವುದಾದರೆ ಸರ್ಕಾರ ಸಿದ್ಧವಾಗಿದೆ, ಅಧ್ಯಕ್ಷರು ಸಮಯವನ್ನು ನಿಗದಿ ಮಾಡಬಹುದು ಎಂದು ಹೇಳಿದ್ದೇನೆ, ಅದನ್ನು ಮಾನ್ಯ ಸದಸ್ಯರು ಅಪಾರ್ಥ ಮಾಡಿಕೊಳ್ಳಬಾರದು.

ಛೇರ್ಮನ್. — ಮಾನ್ಯ ಸದಸ್ಯರಿಗೆ ವಿವರಣೆಗಳನ್ನು ಕೇಳುವ ಹಕ್ಕುಂಟು ಮತ್ತು ಸರ್ಕಾರಕ್ಕೂ ಕೂಡ ಸಮರ್ಥನೀಯವಾದ ಉತ್ತರ ಕೊಡುವ ಜವಾಬ್ದಾರಿ ಉಂಟು. ಆದರೆ, ಮಾನ್ಯ ಸದಸ್ಯರುಗಳು ವಿಷಯಕ್ಕೆ ಸಂಬಂಧಿಸದ ವಿಚಾರಗಳನ್ನು ಕೇಳಿದರೆ ಮಾನ್ಯ ಸಚಿವರುಗಳು ಅದಕ್ಕೆ ಉತ್ತರ ಕೊಡುವುದಕ್ಕೆ ಸಿದ್ಧರಾಗಿ ಬಂದಿರುವುದಿಲ್ಲ. ಆದುದರಿಂದ, ಸದಸ್ಯರುಗಳು ಗಮನ ಸೆಳೆಯುವ ಸೂಚನೆಯ ವಿಷಯಕ್ಕೆ ಸೀಮಿತವಾದಂತೆ ವಿವರಣೆಗಳನ್ನು ಕೇಳಬಹುದು. ನಂತರ ಬೇಕಾದರೆ ಚರ್ಚೆ ಮಾಡೋಣವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅವರು ಹೇಳುತ್ತಿರುವ ವಿಚಾರ ಸಾಧುವಾಗಿದೆ. ಆದುದರಿಂದ, ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ಮಾತ್ರ ಕೇಳಬೇಕು.

ಶ್ರೀ ಎಂ. ವಿ. ರಾಜಶೇಖರನ್.—ರೈತನು ಉಪಯೋಗಿಸುವ ಗೊಬ್ಬರ ಮತ್ತಿತರ ವಸ್ತುಗಳ ಬೆಲೆ ಏರಿಕೆ ವಿಚಾರ ಬಂದಾಗ ಆತನು ಬೆಳೆದ ಪದಾರ್ಥಗಳಿಗೆ ಯೋಗ್ಯ ಬೆಲೆ ನಿಗದಿ ಮಾಡುವ ವಿಚಾರವನ್ನೂ ಸದಸ್ಯರುಗಳು ಪ್ರಸ್ತಾಪ ಮಾಡುವರೆಂದು ನಿರೀಕ್ಷಿಸಿ ಅದರ ಬಗ್ಗೆ ಮಾಹಿತಿಯನ್ನು ಮಾನ್ಯ ಸಚಿವರು ತಿಳಿದುಕೊಳ್ಳಬೇಕಾಗಿತ್ತು. ಈಗಲೂ ಅವರು ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ತರಿಸಬಹುದು. ರಾಜ್ಯದ ಎಲ್ಲಾ ಕಡೆಗಳಲ್ಲೂ ಇನ್ನು ಎಂಟು ಹತ್ತು ದಿವಸಗಳಲ್ಲಿ ಬಿತ್ತನೆ ಪ್ರಾರಂಭವಾಗುತ್ತದೆ. ಹೀಗಿರುವಾಗ, ರಾಸಾಯನಿಕ ಗೊಬ್ಬರಗಳ ಬೆಲೆಯನ್ನು ನಿಗದಿ ಮಾಡಿ ಕೂಡಲೇ ವಿತರಣೆ ಮಾಡಬೇಕು. ಇಲ್ಲದಿದ್ದರೆ ಇನ್ನು ಯಾವಾಗ ಮಾಡುತ್ತೀರಿ ? ಆದುದರಿಂದ, ಮಾನ್ಯ ಸಚಿವರು ರೈತರ ಕಷ್ಟವನ್ನು ನಿವಾರಣೆ ಮಾಡುತ್ತೇವೆಂದು ಈಗಲೇ ಹೇಳಬೇಕು.

ಛೇರ್ಮನ್.—ರೈತರು ಬೆಳೆಯತಕ್ಕ ಪದಾರ್ಥಗಳಿಗೆ ಲಾಭದಾಯಕವಾದ ಬೆಲೆ ಸಿಗುತ್ತಿಲ್ಲವೆಂದು ತಾವು ಅಭಿಪ್ರಾಯಪಡುತ್ತಿದ್ದೀರಿ. ಆದರೆ, ಮಾನ್ಯ ಸಚಿವರು ಅದಕ್ಕೆ ಸರಿಯಾದ ಉತ್ತರ ಕೊಡುವುದಕ್ಕೆ ಸಿದ್ಧರಾಗಿ ಬಂದಿಲ್ಲ. ಏಕೆಂದರೆ, ಈ ಗಮನ ಸೆಳೆಯುವ ಸೂಚನೆ ವಿಷಯದಲ್ಲಿ ಅದು ಸೇರಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ವಿ. ರಾಜಶೇಖರನ್.—ಅವರ ಪಕ್ಷದ ಸಭೆ ನಿನ್ನೆಯು ದಿವಸ ಸೇರಿ ಈ ವಿಚಾರವಾಗಿ ಅಲ್ಲಿ ಚರ್ಚೆ ಮಾಡಲಾಗಿದೆ. ಅದು ಇಂದಿನ ಪತ್ರಿಕೆಯಲ್ಲಿ ಬಂದಿದೆ.

ಛೇರ್ಮನ್.—ಪಕ್ಷದ ಸಭೆಯಲ್ಲಿ ನಡೆದಿರುವುದಕ್ಕೂ ಮತ್ತು ಪತ್ರಿಕೆಯಲ್ಲಿ ವರದಿಯಾಗಿರುವುದಕ್ಕೂ ಅರ್ಥಾತ್ ಸಂಬಂಧವಿರಬಹುದು. ಆದರೆ...

ಶ್ರೀ ಎಂ. ವಿ. ರಾಜಶೇಖರನ್.—ಪಕ್ಷದ ಸಭೆಯಲ್ಲಿ ಏನು ಚರ್ಚೆ ಮಾಡಲಾಗಿದೆ ಅದು ಅವರ ಪಕ್ಷದ್ದೇ ಆದ ಸರ್ಕಾರದ ಮೇಲೆ ಪರಿಣಾಮ ಬೀರುತ್ತದೆ. ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಸಬ್ಸಿಡಿ ಕೊಡುವುದಕ್ಕೆ ಸಭೆ ತೀರ್ಮಾನ ಮಾಡಿದೆ ಮತ್ತು ಹಾಗೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದು ಆ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಆದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?

ಛೇರ್ಮನ್.—ಮಾನ್ಯ ಸದಸ್ಯರಿಗೆ ರೈತರ ಬಗ್ಗೆ ಇರತಕ್ಕ ಪ್ರೀತಿ, ವಿಶ್ವಾಸ, ಮತ್ತು ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಈ ಗಮನ ಸೆಳೆಯುವ ಸೂಚನೆಯಲ್ಲಿ ಆ ವಿಷಯವನ್ನು ತಂದು ಸಭೆಯ ಕಾಲವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುವುದಕ್ಕೆ ಅಡ್ಡಿ ಬರುತ್ತಿದ್ದಾರೇನೋ ಎನ್ನುವ ಭಾವನೆ ಬರುತ್ತಿದೆ. ಗೊಬ್ಬರಕ್ಕೆ ಸಂಬಂಧಿಸಿದಂತೆ ಈಗ ಚರ್ಚೆಯಾಗುತ್ತಿದೆ. ಆದರ ಬಗ್ಗೆ ಸರ್ಕಾರದ ಮುಂದೆ ಏನೇನು ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ವಿವರಣೆಗಳನ್ನು ಕೇಳಿ ಅದಕ್ಕೆ ಸರ್ಕಾರದಿಂದ ಉತ್ತರ ಪಡೆಯಬಹುದು. ಅದು ಬಿಟ್ಟು, ರೈತರು ಉತ್ಪನ್ನ ಮಾಡುವ ಬೆಳೆಗಳಿಗೆ ಯೋಗ್ಯ ಬೆಲೆಯನ್ನು ನಿಗದಿ ಮಾಡುವ ಬಗ್ಗೆ ವಿವರಣೆಯನ್ನು ಈ ಸಂದರ್ಭದಲ್ಲಿ ಕೇಳುವುದು ಸರಿಯಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಅದೆಲ್ಲಾ ಇದರಲ್ಲಿ ಸೇರಿಕೊಂಡಿದೆ. ರೈತನು ಬೆಳೆಯತಕ್ಕ ಬೆಳೆಗಳ ಬೆಲೆ ಅವನು ಉಪಯೋಗಿಸುವ ಗೊಬ್ಬರ, ಬೀಜ ಮತ್ತಿತರ ಬೆಲೆಗಳನ್ನವಲಂಬಿಸಿರುತ್ತದೆ. ಆದುದರಿಂದ, ಈ ವಿಚಾರ ಅದಕ್ಕೆ ಸಂಬಂಧಪಡುವುದಿಲ್ಲವೆಂದರೆ ನಾನು ಇನ್ನೇನನ್ನು ಹೇಳಲಿ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಗೊಬ್ಬರದ ದಾಸ್ತಾನು ಮತ್ತದರ ಹಂಚಿಕೆ ಹಾಗೂ ಹಾಲಿ ಇರುವ ಗೊಬ್ಬರವನ್ನು ಹಳೆಯ ಬೆಲೆಗೆ ಮಾರಬೇಕೇ ಹೊರತು ಹೊಸ ಬೆಲೆಗೆ ಮಾರಬಾರದು ಎನ್ನುವುದು ಈಗಿರುವ ಚರ್ಚೆಯ ವಿಷಯ. ಗೊಬ್ಬರದ ದಾಸ್ತಾನು ಮತ್ತು ಹಂಚಿಕೆ ಬಗ್ಗೆ ಚರ್ಚೆ ಮಾಡಬೇಕೆಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. ಈ ಬಗ್ಗೆ ಸುಧೀರ್ಘವಾದ ಚರ್ಚೆಯನ್ನು ನಡೆಸಬೇಕಾದರೆ, ನಾವು ಮತ್ತೆ ೨೫ನೇ ತಾರೀಖು ಸೇರುತ್ತೇವೆ ಆಗ ಬೇರೆ ರೂಪದಲ್ಲಿ ಇದನ್ನು ತೆಗೆದುಕೊಳ್ಳಬಹುದು. ಮಾನ್ಯ ಸದಸ್ಯರುಗಳು ಈ ಬಗ್ಗೆ ಬಹಳ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಸಾಕಷ್ಟು ಕಡೆ ಈಗಾಗಲೇ ಬಿತ್ತನೆಯಾಗಿದ್ದು ಕೆಲವು ಕಡೆ ಬೆಳೆ ಬಿತ್ತನೆಗೆ ಬಂದಿದೆ ಎಂದು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಈ ಭಾಗಗಳಿಗೆ ನಾವು ಗೊಬ್ಬರವನ್ನು ಹಂಚಿಕೆ ಮಾಡಲು ದಾಸ್ತಾನು ಎಷ್ಟು ಇದೆ, ಯಾವ ಪ್ರಕಾರ ವಿತರಣೆಯನ್ನು ಮಾಡಬೇಕಾಗುತ್ತದೆ ಎನ್ನುವುದೆಲ್ಲವನ್ನೂ ಇಲ್ಲಿ ನೋಡಬೇಕಾಗಿದೆ. ಆದರ ಬಗ್ಗೆ ಇಲ್ಲಿ ಪ್ರಸ್ತಾಪಿಸಿ ಇದನ್ನು ಇಲ್ಲಿಗೆ ಮುಗಿಸೋಣ. ಈ ಬಗ್ಗೆ ಸುಧೀರ್ಘ ಚರ್ಚೆಯಾಗಲೇಬೇಕೆಂದರೆ,

ಸಭೆಯ ಅಧ್ಯಕ್ಷರು ಚರ್ಚೆ ಮಾಡಲು ಅವಕಾಶವನ್ನು ಕೊಟ್ಟರೆ ದಿನಾಂಕ ಹಾಗೂ ಕಾಲವನ್ನು ಅವರು ನಿಗದಿ ಮಾಡುವುದಾದರೆ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ಇದೇನೂ ಚರ್ಚೆಗೆ ಅನರ್ಹವಾದ ವಿಷಯವಲ್ಲ. ಈಗ ಇಲ್ಲಿ ಈ ವಿಷಯ ಗಮನ ಸೆಳೆಯುವ ಸೂಚನೆಯ ಮುಖಾಂತರ ಬಂದಿದೆ.

ಶ್ರೀ ಜೆ. ಎಚ್. ಪಟೇಲ್.—ಈ ಬಗ್ಗೆ ಸರ್ಕಾರ ಸವಿವರವಾಗಿ ಮಾತನಾಡಲು ಯಾವಾಗ ತಯಾರಾಗಿ ಬರುತ್ತದೆಂಬುದನ್ನು ತಿಳಿಸಬೇಕು. ಈ ಗೊಬ್ಬರದ ಬಗ್ಗೆ ವಿಚಾರ ಮಾಡುವಾಗ, ರೈತ ಕೊಳ್ಳತಕ್ಕ ಗೊಬ್ಬರ ಹಾಗೂ ಇನ್ನಿತರ ವಸ್ತುಗಳ ಬೆಲೆ ಜಾಸ್ತಿ ಆಗಿರುವುದರಿಂದ ಆತನಿಗೆ ಬಹಳ ತೊಂದರೆಯಾಗಿದೆ. ಇದರಿಂದ ರೈತರಿಗೆ ತೊಂದರೆಯಾಗಿದ್ದರೆ ಬೆಂಬಲ ಬೆಲೆ ಕೊಡಬೇಕಾಗುತ್ತದೆ. ಇದಕ್ಕೆಲ್ಲಾ ಉತ್ತರವನ್ನು ಕೊಡಲು ಸರ್ಕಾರ ತಯಾರಾಗಿ ಬರಬೇಕು.

ಶ್ರೀ ಎಸ್. ಬಂಗಾರಪ್ಪ.—ಈ ವಿಷಯದ ಬಗ್ಗೆ ಸಭಾಧ್ಯಕ್ಷರು ಅವಕಾಶ ಕೊಡುವುದಾದರೆ ಸರ್ಕಾರ ಸಿದ್ಧವಾಗಿದೆ.

ಛೇರ್ಮನ್.—ರೈತರ ಮೇಲೆ ಇದು ಬಹಳ ಪರಿಣಾಮ ಬೀರುತ್ತದೆ ಎನ್ನುವ ವಿಚಾರ ಇದಾದ ಪಕ್ಷದಲ್ಲಿ ಈ ಬಗ್ಗೆ ಸವಗ್ರವಾದ ಚರ್ಚೆಯಾಗಬೇಕಾಗುತ್ತದೆ. ನಾನು ಮೊದಲೇ ತಿಳಿಸಿದ ಪ್ರಕಾರ ಇದು ನಿಯಮಿತ ಕಾಲದಲ್ಲಿ ಮುಗಿಯುವುದಿಲ್ಲ. ಆದ್ದರಿಂದ ಬೇರೆ ಸಂದರ್ಭವನ್ನು ಉಪಯೋಗಿಸಿಕೊಂಡು ಚರ್ಚೆ ಮಾಡಿ ಸರ್ಕಾರದಿಂದ ಉತ್ತರವನ್ನು ಪಡೆಯಬೇಕೆಂದು ನನ್ನ ಸಲಹೆ. ಇದು ಬರೀ ಗಮನ ಸೆಳೆಯುವ ಸೂಚನೆ ಅಷ್ಟೇ.

ಶ್ರೀ ಎಂ. ವಿ. ರಾಜಶೇಖರನ್.—ನನ್ನ ಮಟ್ಟಿಗೆ ಹೇಳುವುದಾದರೆ ಬೆಲೆ ಏರಿಕೆಯ ಬಗ್ಗೆಯೇ ನೇರವಾದ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಎಲ್ಲರೂ ಕಳುಹಿಸತಕ್ಕ ಗಮನಸೆಳೆಯುವ ಸೂಚನೆಗಳನ್ನು ಕಾರ್ಯದರ್ಶಿಗಳು ಕ್ರೋಡೀಕರಿಸುವಾಗ ಕೆಲವು ಬಿಟ್ಟುಹೋಗುವ ಸಂದರ್ಭ ಇರುತ್ತದೆ. ಇದನ್ನು ನಾನು ಒಪ್ಪುತ್ತೇನೆ. ಆದರೆ ತಾವು ವಿಷಯವನ್ನೇ ಕಳುಹಿಸಿಲ್ಲವೆಂದು ಹೇಳುವುದು ಸರಿಯಲ್ಲ. ಇನ್ನು ಎರಡನೆಯದಾಗಿ, ಪಾರ್ಲಿಮೆಂಟ್‌ನಲ್ಲಾಗಲಿ, ವಿಧಾನಸಭೆಯಲ್ಲಿಯಾಗಲೀ ಒಂದು ವಿಷಯ ಪ್ರಸ್ತಾಪಕ್ಕೆ ಬಂದಾಗ ಆ ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ತರಿಸಿ ಇಟ್ಟುಕೊಳ್ಳುವುದು ಒಂದು ವಾಡಿಕೆ ಇದೆ. ಆದರೆ ಇಲ್ಲಿ ಮಂತ್ರಿಗಳು ಈ ಬಗ್ಗೆ ಬಹಳ ಸುಲಭವಾಗಿ ಜಾರಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಬೀಸೋ ದೊಣ್ಣೆಗೆ ತಲೆತಪ್ಪಿಸಿಕೊಂಡರೆ ನೂರು ವರ್ಷ ಆಯಸ್ಸು ಎನ್ನುವ ಹಾಗೆ.

ಛೇರ್ಮನ್.—ಇಲ್ಲಿ ಬೀಸೋ ದೊಣ್ಣೆಗೆ ತಪ್ಪಿಸಿಕೊಳ್ಳುವ ಪ್ರಮೇಯ ಏನು ಬಂತು ?

ಶ್ರೀ ಜೆ. ಎಚ್. ಪಟೇಲ್.—ಇಲ್ಲಿ ಈಗಾಗಲೇ ತಲೆ ಹೋಗಿದೆ. ದೊಣ್ಣೆ ಒಂದೇ ಉಳಿದಿರುವುದು.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ವಿರೋಧ ಪಕ್ಷದವರು ಬೀಸೋ ದೊಣ್ಣೆ ಬಗ್ಗೆ ಹೇಳುತ್ತಿದ್ದಾರೆ. ಆದರೆ ಇಲ್ಲಿ ಸರ್ಕಾರದ ತಲೆ ಬಹಳ ಗಟ್ಟಿಯಾಗಿ ಜೀನ್ಸ್‌ವಾಗಿದೆ. ವಿರೋಧ ಪಕ್ಷಗಳು ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೂ ದೊಣ್ಣೆಗಳು ಬೀಸುತ್ತಿರುತ್ತವೆ. ಆ ದೊಣ್ಣೆ ಯಾರಿಗೆ ಬಡಿದಿದೆಯೋ ಗೊತ್ತಿಲ್ಲ.

ಶ್ರೀ ಜಿ. ಎಸ್. ಶಿವಸಂಜಪ್ಪ.—ಸ್ವಾಮಿ, ಹೋದ ವರ್ಷ ತುಮಕೂರು ಜಿಲ್ಲೆಗೆ ಎರಡೂವರೆ ಸಾವಿರ ಚಿಲ್ಲರೆ ಟನ್ ಗೊಬ್ಬರ ಕೊಟ್ಟಿದ್ದೀರಿ. ಈ ವರ್ಷ ಕೊಟ್ಟಿರುವ ಗೊಬ್ಬರ ಜಿಲ್ಲೆಗೆ ಸಾಕಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಿ. ಹೀಗೆ ರೈತರು ಗೊಬ್ಬರವನ್ನು ಉಪಯೋಗಿಸುತ್ತಿರಲಿಲ್ಲ. ಸರ್ಕಾರದವರು ಬೆಳೆಗೆ ಗೊಬ್ಬರ ಪಾಕಿ ಎಂದು ಪ್ರಚಾರ ಮಾಡಿದ್ದರಿಂದ ರೈತರು ಈಗ ಗೊಬ್ಬರ ಕೊಂಡುಕೊಳ್ಳುತ್ತಿದ್ದಾರೆ. ಇವತ್ತಿನ ದಿವಸ ಬೆಳೆಗ್ಗೆ ಎದ್ದ ತಕ್ಷಣ ಕಾಫಿ ಹೇಗೆ ಮುಖ್ಯವೋ ಅದೇ ರೀತಿ ಭೂಮಿಗೂ ಗೊಬ್ಬರ ಮುಖ್ಯವಾಗಿದೆ. ಗೊಬ್ಬರವನ್ನು ಸರಿಯಾದ ಪ್ರಮಾಣದಲ್ಲಿ ಹಾಕದೇ ಹೋದರೆ ಬಹಳ ತೊಂದರೆಯಾಗುತ್ತದೆ. ರೈತರಿಗೆ ಎಷ್ಟು ಪ್ರಮಾಣದಲ್ಲಿ ಗೊಬ್ಬರ ಬೇಕೋ ಅದನ್ನು ಕೊಡುವುದಕ್ಕೆ ತಾವು ತಯಾರಿದ್ದೀರಾ ? ಅಥವಾ ಇರುವ ದಾಸ್ತಾನನ್ನೇ ಸರಿಯಾದ ಪ್ರಮಾಣದಲ್ಲಿ ಹಂಚುವುದಕ್ಕೇನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಗೊಬ್ಬರ ಇಲ್ಲದೇ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಒಂದು ಎಕರೆಗೆ ಹಾಕುವ ಗೊಬ್ಬರವನ್ನು ಹತ್ತು ಎಕರೆಗೆ ಹಾಕಿದರೆ ಬೆಳೆ ಹಾಳಾಗುತ್ತದೆ. ರೈತರಿಗೆ ಎಷ್ಟು ಗೊಬ್ಬರ ಬೇಕು ಅದನ್ನು ಕೊಡುವುದಕ್ಕೆ ಶಕ್ತಿ ಹಾಗೂ ತಾಕತ್ತು ಇದೆಯೇ ಎಂಬುದನ್ನು ಇಲ್ಲಿ ಹೇಳಬೇಕು.

ಶ್ರೀ ಬಿ. ಎನ್. ಕೆಂಗೇಗೌಡ.—ಈಗ ರಾಜ್ಯಕ್ಕೆ ಎಷ್ಟು ಗೊಬ್ಬರದ ಅವಶ್ಯಕತೆ ಇದೆ ಅಷ್ಟು ಗೊಬ್ಬರ ಸ್ಟಾಕ್ ಇದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಂತ್ರಿಗಳು ಹಾಗೆ ಹೇಳಲಿಲ್ಲ. ರಾಜ್ಯದಲ್ಲಿ ಎಷ್ಟು ಸ್ಟಾಕ್ ಇದೆ ಎಂಬುದನ್ನು ಮಾತ್ರ ಹೇಳಿದರು ಅಷ್ಟೇ.

ಶ್ರೀ ಬಿ. ಎನ್. ಕೆಂಗೇಗೌಡ.—ಈಗ ರಸಗೊಬ್ಬರಗಳ ಬೆಲೆ ಜಾಸ್ತಿಯಾಗಿದೆ. ರೈತರ ಕಾಸ್ಟ್ ಆಫ್ ಕಲ್ಟಿವೇಶನ್ ಕೂಡ ಜಾಸ್ತಿಯಾಗಿದೆ. ರೈತನು ಕೊಳ್ಳತಕ್ಕ ಇತರ ಸಾಮಾನುಗಳ ಬೆಲೆಗಳೂ ಕೂಡ ಜಾಸ್ತಿಯಾಗಿವೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರ ರಸಗೊಬ್ಬರವನ್ನು ಸಬ್‌ಸಿಡೈಸ್ ದರದಲ್ಲಿ ಅಥವಾ ಕಡಿಮೆ ದರದಲ್ಲಿ ರೈತರಿಗೆ ಹಂಚುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದನ್ನು ಸರ್ಕಾರ ಇಲ್ಲಿ ಒಪ್ಪಿದರೆ, ಚರ್ಚೆಗೆ ಅವಕಾಶವೇ ಇಲ್ಲ.

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ಇಲ್ಲಿ ಬಹಳ ದೊಡ್ಡ ಸಮಸ್ಯೆಗೆ ಸಂಬಂಧಪಟ್ಟ ವಿಷಯವನ್ನು ಚಿಕ್ಕ ಗಮನ ಸೆಳೆಯುವ ಸೂಚನೆ ಮೂಲಕ ತಂದಿರುವುದನ್ನು ನೋಡಿ ನನಗೆ ಬಹಳ ನೋವಾಗುತ್ತದೆ. ಆ ವಿಷಯ ಇಲ್ಲಿ ಬಂದಿರುವುದೇನೋ ಸರಿ. ರೈತರ ಸಮಸ್ಯೆ ಕುರಿತು ಮಾತನಾಡಿ ಅದನ್ನು ಗಾಳಿಗೆ ಬಿಡುವ ರೂಪದಲ್ಲಾಗಿದೆ. ರೈತನ ಕಷ್ಟ ಮತ್ತು ಅವನ ಬೆಳೆಗೆ ಸಿಗಬೇಕಾದ ಲಾಭ, ಈ ಬಗ್ಗೆ ಸರ್ಕಾರದ ಮತಿಯಿಂದ ಏನು ಸಲಹೆ ಬರಬೇಕೆನ್ನುವುದರಲ್ಲಿ, ಈ ವಿಚಾರಗಳನ್ನು ಕೂಲಂಕಷವಾಗಿ ಮಾತನಾಡಿ, ತೀರ್ಮಾನ ತೆಗೆದುಕೊಂಡು ಸರ್ಕಾರ ಈ ಬಗ್ಗೆ ಏನು ಮಾಡಿದ್ದಾರೆನ್ನುವ ದೃಷ್ಟಿಯಿಂದ ಉಪಯುಕ್ತವಾದ ಸಲಹೆಗಳನ್ನು ಕೊಡಬೇಕೆನ್ನುವುದು ಸ್ವವೇದ್ಯವಾದ ವಿಚಾರ. ಈ ಬಗ್ಗೆ ಏನೇನು ತೊಡಕುಗಳಿವೆಯೆಂಬುದನ್ನು ಮಾನ್ಯ ಆಡಳಿತ ಪಕ್ಷದವರು ಹೇಳಿದ್ದಾರೆ. ರಾಜ್ಯ ಸರ್ಕಾರದವರು ಹೇಳುವುದರಲ್ಲಿ, ಇದರಲ್ಲಿ ಎಲ್ಲಾ ತೂರಿಸಿಬಿಟ್ಟು ವರದಿಯನ್ನು ತಯಾರಿಸಿವಾಗ ರೈತರ ಮೇಲೆ ಮಂಗಳಾರತಿಯನ್ನು ಮಾಡುವುದೆಂದು...

ಶ್ರೀ ಕೆ. ಎಚ್, ಶ್ರೀನಿವಾಸ್.—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀ ಕೆಂಗೇಗೌಡ ಅವರು ಬಹಳ ಪ್ರಾಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿ ಈಗ ಸಭೆಯಿಂದ ಹೊರಗಡೆಗೆ ಹೋಗುತ್ತಿದ್ದಾರೆ. ಅವರು ಸಭೆಯಲ್ಲೇ ಇದ್ದರೆ ಚೆನ್ನಾಗಿರುತ್ತದೆ.

CHAIRMAN.—I cannot compel him.

ಶ್ರೀ ಕೆ. ಪ್ರಭಾಕರ್.—ಕಾನೂನನ್ನು ಅನುಸರಿಸಿ, ಈ ವಿಷಯ ಬಹಳ ದರ್ದಿನದು ಎಂದು ತಿಳಿದು ಈ ವಿಷಯವನ್ನು ಹೆಚ್ಚು ಕಾಲ ಚರ್ಚೆ ಮಾಡುವುದು ಸೂಕ್ತ. ಹಿಂದೆ ಎಷ್ಟೋ ಸಾರಿ ಇಂತಹ ವಿಚಾರಗಳನ್ನು ಧೀರ್ಘವಾಗಿ ಚರ್ಚೆ ಮಾಡುವುದಕ್ಕೋಸ್ಕರ ಪಿದ್ದುಪಡಿ ಮಾಡಿದ ನಿದರ್ಶನಗಳು ಇವೆ. ಇದಕ್ಕೆ ಒಂದು ಹೆಚ್ಚಿನ ಅವಕಾಶವನ್ನು ಕೊಡಬೇಕು.

ಚೇರ್‌ಮನ್.—ತಮ್ಮ ಸಲಹೆಯನ್ನು ಗುರುತಿಸಿಕೊಳ್ಳಲಾಗಿದೆ. ಈಗ ಕೊಟ್ಟಿರತಕ್ಕಂಥ ಹೇಳಿಕೆಗೆ ಸಂಬಂಧಪಟ್ಟಹಾಗೆ ಸ್ಪಷ್ಟೀಕರಣವೇನಾದರೂ ಇದ್ದರೆ ಕೇಳಿ. Your suggestion is noted and it will be considered some time later for fuller discussion.

ಶ್ರೀ ಕೆ. ಪ್ರಭಾಕರ್.—ಆಗ ನನಗೆ ಪೂರ್ಣ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಚೇರ್‌ಮನ್.—ಹಾಗೆ ಆಗಲಿ.

ಶ್ರೀ ಪಿ. ರಾಮದೇವ್.—ಬೆಳೆಗಾರರ ಬಗ್ಗೆ ನಾನು ಹೇಳುವುದೇನೆಂದರೆ.....

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ರಾಮ್‌ದೇವ್ ಅವರಿಗೆ ಹೇಳುತ್ತೇನೆ, ಅವರು ಕಾಲುವೆಯಲ್ಲಿ ನೀರೇ ಇಲ್ಲವೆಂದು ಚಿಂತೆ ಮಾಡುತ್ತಿರುವಾಗ, ಗೊಬ್ಬರದ ಯೋಚನೆ ನಿಮಗೆ ಏತಕ್ಕೆ ?

ಶ್ರೀ ಪಿ. ರಾಮದೇವ್. —ನಾನು ಬೆಳಗಾರನವನಿದ್ದರೂ ಅವರ ಪರವಾಗಿ ನಾನು ಕೇಳಿಕೊಳ್ಳುವುದೇನೆಂದರೆ ರೈತರಿಗೆ ಸಕಾಲದಲ್ಲಿ ಅವರಿಗೆ ವ್ಯವಸಾಯಕ್ಕೆ ಬೇಕಾದ ಸವಲತ್ತುಗಳನ್ನು ಸಬ್‌ಸಿಡಿ ರೀತಿಯಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆತ್ಮಾನಂದ. —ಮಾನ್ಯ ಅಧ್ಯಕ್ಷರೇ ಈಗಾಗಲೇ ಆವಿ ಭತ್ತವನ್ನು ಸರ್ಕಾರದವರು ಸಂಗ್ರಹಣೆ ಮಾಡತಕ್ಕಂಥ ಕೆಲಸದಲ್ಲಿ ನಿರತರಾಗಿದ್ದಾರೆ ಅವಕ್ಕೆ ಏನಾದರೂ ಪುನರ್‌ವಿಮರ್ಶಿತ ದರವನ್ನು ಕೊಡುವುದಕ್ಕೆ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಮಂಡ್ಯಾದಲ್ಲಿ ತಮಗೆ ಗೊತ್ತಿರುವ ಹಾಗೆ ಕಬ್ಬನ್ನು ಮತ್ತು ಬತ್ತವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಸರ್ಕಾರದವರು ದಾಸ್ತಾನು ಮಾಡಿರತಕ್ಕಂಥಾದ್ದು ಸಾಕಾಗುವುದಿಲ್ಲವೆಂದು ಹೇಳುತ್ತಿರುವುದರಿಂದ ಇನ್ನೂ ಹೆಚ್ಚಿನ ಸ್ಮಶಾನದಲ್ಲಿ ದಾಸ್ತಾನು ಮಾಡಲು ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ —ತಾವು ಕೊಟ್ಟಿರುವ ಮಾಹಿತಿ ಪ್ರಕಾರ ಈ ವರ್ಷ ಇರುವ ರಸಗೊಬ್ಬರದ ಸ್ಟಾಕ್ ದಿಮ್ಯಾಂಡ್‌ಗೆ ತಕ್ಕಷ್ಟು ಇರುತ್ತದೆಂದು ಹೇಳಿರುತ್ತೀರಿ ಈಗಿರತಕ್ಕಂಥ ಸ್ಟಾಕ್ ಏನು ಇರುತ್ತದೆ ಅದು ಹಿಂದಿನ ಬೆಲೆಗೆ ಕೊಂಡದ್ದಾಗಿರುತ್ತದೆ. ಮಾರ್ಕೆಟ್‌ನಲ್ಲಿ ಬೆಲೆ ಜಾಸ್ತಿಯಾಗಿರುತ್ತದೆಂದು ಸರ್ಕಾರದವರೂ ಬೆಲೆ ಜಾಸ್ತಿ ಮಾಡಿ ರೈತರ ಮೇಲೆ ಹೊರೆಯನ್ನು ಹಾಕತಕ್ಕಂಥಾದ್ದು ಸರಿಯಲ್ಲ. ನೀವು ಕೊಟ್ಟಿರತಕ್ಕಂಥಾದ್ದು ಸ್ಟಾಕ್ ಗಿನೇ ಜೂನ್ ೧೯೮೦ಕ್ಕೆ ಇರತಕ್ಕಂಥಾದ್ದು. ಬೆಲೆಗಳು ಜಾಸ್ತಿಯಾಗಿರತಕ್ಕಂಥಾದ್ದು ಅನೇ ಜೂನ್ ೧೯೮೦ ಏಳನೆ ತಾರೀಕಿಂದ ಸ್ಟಾಕ್ ಏಲ್ಲ ಕ್ಲಿಯರ್ ಆಗಿದ್ದಿದ್ದರೆ ಹೊಸ ಸ್ಟಾಕ್‌ಗೆ ಬೆಲೆಯನ್ನು ಹೆಚ್ಚಿಸುವುದರಲ್ಲಿ ಯಾವ ಆಭ್ಯಂತರವೂ ಇಲ್ಲ. ಆದ್ದರಿಂದ ಹಿಂದಿನ ಸ್ಟಾಕ್ ಏನು ಇರುತ್ತದೆ ಅದನ್ನು ಸಬ್‌ಸಿಡಿ ರೂಪದಲ್ಲಿ ರೈತರಿಗೆ ಮಾರಾಟವನ್ನು ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮಾನ್ಯ ಸದಸ್ಯರು ಎತ್ತಿರತಕ್ಕಂಥ ಪ್ರಶ್ನೆ ಸರ್ಕಾರದ ವತಿಯಲ್ಲಿ ಏನು ಗೊಬ್ಬರದ ದಾಸ್ತಾನು ಇರುತ್ತವೆ ಅದರ ಬಗ್ಗೆಯಾಗಿರುತ್ತದೆ. ಹಲವಾರು ಮಾನ್ಯ ಸದಸ್ಯರಿಗೆ ಅನುಮಾನ ಉದ್ಭವವಾಗಿರುವಂಥದ್ದು ಇದರಲ್ಲಿ ಎರಡು ವಿಧವಾಗಿರುತ್ತದೆ. ಒಂದು ಗೊಬ್ಬರದ ದಾಸ್ತಾನು ಎಷ್ಟಿದೆ ಏಂಬುದು, ಮತ್ತೊಂದು ಅದರ ವಿತರಣೆಯ ವಿಷಯ. ಶ್ರೀಮಾನ್ ಚಂದ್ರಶೇಖರ್‌ರವರು ಕೇಳಿರತಕ್ಕಂಥದ್ದು ಎಂದರೆ ಅದರ ಬೆಲೆಯ ವಿಷಯ. ಈಗ ಮುಖ್ಯವಾಗಿ ನಮ್ಮಲ್ಲಿ ಹಳೇ ದಾಸ್ತಾನು ಏನು ಇರುತ್ತದೆ ಅದೆನ್ನು ಹಿಂದಿನ ಬೆಲೆಗೆ ಮಾರಾಟ ಮಾಡುವುದನ್ನು ಬಿಟ್ಟು ಬೇರೆ ಬೇರೆ ಬೆಲೆಗೆ ದೂರುತ್ತಿರುವುದಕ್ಕೆ ಕಾರಣ ನಾವು ಮಾರ್ಕೆಟಿಂಗ್ ಫೆಡರೇಷನ್ ಮೂಲಕ ೪೦-೪೫-೫೦ ಪರ್ಸೆಂಟ್ ವಿತರಣೆ ಮಾಡತಕ್ಕಂಥಾದ್ದು ಇರುತ್ತದೆ. ಇನ್ನು ಉಳಿದು ಬರತಕ್ಕಂಥಾದ್ದನ್ನು ಖಾಸಗಿಯಾಗಿ ವಿತರಣೆ ಮಾಡತಕ್ಕಂಥಾದ್ದು ಇರುತ್ತದೆ. ಇದು ನಾವು ನೀವು ಕಂಡಿತು ಮಾಡಿರತಕ್ಕಂಥ ನೀತಿಯಲ್ಲ. ಇದು ಕೇಂದ್ರ ಸರ್ಕಾರದ ನೀತಿಯಾಗಿರುತ್ತದೆ. ತಿರ್ಮಾನ ನಾವು ಇಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕ್ಕೋಸ್ಕರವಾಗಿ ದಾಸ್ತಾನನ್ನು ನಾವು ಗುಟ್ಟುಕೊಂಡಿದ್ದರೂ ಮಳೆ ಬೆಲೆಗೆ ಮಾರದೆ ಹೊಸ ಬೆಲೆಗೆ ವಿತರಕ್ಕೆ ಮಾರಬೇಕು ಎಂದು ಕೇಳತಕ್ಕಂಥ ಪಕ್ಕು ಸಮಂಗ ಇಲ್ಲ. ವಿತರಕ್ಕಂದರೆ ೫೦ ಪರ್ಸೆಂಟ್ ಮಾತ್ರ ನಮ್ಮ ಸರ್ಕಾರದ ಮೂಲಕ ವಿತರಣೆ ಮಾಡತಕ್ಕಂಥಾದ್ದಾಗಿರುತ್ತದೆ. ಈ ವಿಷಯವನ್ನು ನಾವು ಆರಿಯಬೇಕು. ಹೊಸ ಬೆಲೆಗೆ ಮಾರುವುದರಿಂದ ರೈತರಿಗೆ ಅನ್ಯಾಯವಾಗುತ್ತಿದೆ ಎನ್ನುವ ವಿಷಯ ತಿಳಿದು, ಇದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡಿ ಈಗ ಎಲ್ಲೆಲ್ಲಿ ಯಾವ ಯಾವ ಸೊಸೈಟಿಯಲ್ಲಿ ದಾಸ್ತಾನು ಇರುತ್ತದೆ ಅದನ್ನು ಸದ್ಯಕ್ಕೆ ಮಾರಾಟ ಮಾಡುವುದನ್ನು ನಿಲ್ಲಿಸಿ ಯಾವತ್ತು ನಾವು ವಿತರಣೆ ಮಾಡಲು ತಿಳಿಸುತ್ತೇವೆಯೋ ಆವಾಗ ವಿತರಣೆಯನ್ನು ಮಾಡುವಂತೆ ತಿಳಿಸುತ್ತೇವೆ. ಈ ಮಧ್ಯೆ ನಾವು ಈ ವಿಷಯವನ್ನು ೫೦-೫೫ನೇ ತಾರೀಕಿನೊಳಗೆ ಚರ್ಚೆಗೆ ನಿಗದಿಮಾಡಿ ಚರ್ಚೆಯಾದ ನಂತರ ಮುಂದೆ ಏನು ಮಾಡುತ್ತೇವೆ ಎನ್ನುವುದನ್ನು ಸದನಕ್ಕೆ ತಿಳಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಕೆ. ವಿಜ್. ಹನುಮೇಗೌಡ. —ಪೇಪರ್‌ನಲ್ಲಿ ಬಂದಿರತಕ್ಕಂಥ ವರದಿಯ ಪ್ರಕಾರ ಕೇಂದ್ರ ಸರ್ಕಾರದವರು ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಿರುವುದರಿಂದ ರಾಜ್ಯ ಸರ್ಕಾರಗಳು ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡುವ ವರದಿ ಇದೆ. ಅದರಂತೆ ಮಾರ್ಕೆಟಿಂಗ್ ಫೆಡರೇಷನ್‌ರವರು ಮತ್ತು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ರೇಟ್ ರಿವೈಸ್ ಮಾಡತಕ್ಕಂಥ ಸಂದರ್ಭಗಳು ಇರುತ್ತವೆ. ಆದ್ದರಿಂದ ರೈತರಿಗೆ ಸಬ್‌ಸಿಡೈಸ್ಡ್ ರೀತಿಯಲ್ಲಿ ಗೊಬ್ಬರವನ್ನು ವಿತರಣೆ ಮಾಡುವ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಇದರ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರುವುದು ನಾನು ನೋಡಿಲ್ಲ. ಕೇಂದ್ರ ವ್ಯವಸಾಯ ಮಂತ್ರಿಗಳು ಸಬ್ಸಿಡಿ ಕೊಡುತ್ತೇವೆ ಎನ್ನುವ ವಿಷಯ ಮತ್ತು ಅದನ್ನು ಪರಿಶೀಲನೆ ಮಾಡುತ್ತೇವೆ ಎನ್ನುವ ವಿಷಯವನ್ನು ಹೇಳಿದ್ದಾರೆ ಅದು ಪತ್ರಿಕೆಯಲ್ಲೂ ಬಂದಿರುತ್ತದೆ. ಆದರೆ ಎಷ್ಟರವಟ್ಟಿಗೆ ಅವರು ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ ಎನ್ನುವ ವಿಷಯ ಕೊಟ್ಟಿಲ್ಲ. ಈಗಿರತಕ್ಕ ವಿಷಯದ ಬಗ್ಗೆ ಮಾತ್ರ ನನ್ನ ಅಭಿಪ್ರಾಯವನ್ನು ಸೀಮಿತಗೊಳಿಸುತ್ತೇನೆ. ಇತ್ತೀಚೆಗೆ ಪೆಟ್ರೋಲ್ ಬೆಲೆ ಜಾಸ್ತಿಯಾದಾಗ ಧಾರವಾಡದಲ್ಲಿ ಹೆಚ್ಚಿನ ಸ್ಟಾಕ್ ಇಟ್ಟಿದ್ದವರನ್ನು ಅಲ್ಲಿನ ಜಿಲ್ಲಾಧಿಕಾರಿಯವರು ಹಿಡಿದುಹಾಕಿದ್ದಾರೆ ಎಂದು ಮಾನ್ಯ ದೇವೇಗೌಡರು ಹೇಳಿದರು. ಇರಬಹುದು, ಆ ಅಧಿಕಾರಿ ದಕ್ಷತೆಯಿಂದ ಕೆಲಸ ಮಾಡಿರುವುದರಿಂದ ಅವರನ್ನು ಅಭಿನಂದಿಸಬಯಸುತ್ತೇನೆ. ಗೊಬ್ಬರದ ವಿಚಾರವನ್ನು ಇವತ್ತು ಇಲ್ಲವೇ ನಾಳೆಯೊಳಗೆ ಪರಿಶೀಲನೆ ಮಾಡಿ ಸದನಕ್ಕೆ ತಿಳಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತೀರ್ಮಾನ ಎಂದರೆ ತಮ್ಮ ಹತೋಟಿಯಲ್ಲಿರತಕ್ಕ ಸ್ಟಾಕನ್ನು ಹಳೆಯ ರೇಟಿನಲ್ಲಿ ಮಾರುವ ಬಗ್ಗೆಯೋ ? ಅಥವಾ ಹೊಸ ರೇಟಿನಲ್ಲಿ ಮಾರುವ ಬಗ್ಗೆಯೋ ?

ಶ್ರೀ ಎಸ್. ಬಂಗಾರಪ್ಪ.—ಹಳೇ ರೇಟಿಗೆ ಮಾರಿದರು ಲಾಸ್ ಏನೂ ಇಲ್ಲ. ಆದರೆ ಹೆಚ್ಚಿನ ರೇಟಿಗೆ ಮಾರಿದರೆ ಸೊಸೈಟಿಗೆ ಲಾಭ ಬರುತ್ತದೆ.

ಶ್ರೀ ಪಿ. ರಾಂದೇವ್.—ಇದೂ ಒಂದು ರೀತಿಯ ಶೋಷಣೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸರ್ಕಾರದ ಹತೋಟಿಯಲ್ಲಿರತಕ್ಕ ಸ್ಟಾಕ್‌ನ್ನು ಹಳೇ ರೇಟಿಗೇ ಮಾರಿದರೆ ಅನುಕೂಲವೇನೋ ಆಗುತ್ತದೆ. ಆದರೆ, ಇದರಿಂದ ಸೊಸೈಟಿಗೂ ಲಾಭ ಬರುವುದಿಲ್ಲ, ಕೇಂದ್ರ ಸರ್ಕಾರಕ್ಕೂ ಲಾಭ ಬರುವುದಿಲ್ಲ. ರಾಜ್ಯ ಸರ್ಕಾರಕ್ಕೂ ಲಾಭ ಬರುವುದಿಲ್ಲ, ರೈತರಿಗೂ ಅನುಕೂಲವಾಗುವುದಿಲ್ಲ. ಮಧ್ಯವರ್ತಿ ಜನ ಇದರಿಂದ ಹಣ ಸಂಪಾದನೆ ಮಾಡಿಕೊಳ್ಳುತ್ತಾರೆ. ಇಂಥ ಪರಿಸ್ಥಿತಿ ಇದೊಂದೇ ಸಾರಿಯಲ್ಲ, ಸರ್ಕಾರದವರು ಯಾವಾಗ ಪದಾರ್ಥಗಳ ಬೆಲೆಯನ್ನು ಜಾಸ್ತಿ ಮಾಡಿದರೂ ಇಂಥ ಪರಿಸ್ಥಿತಿ ಉದ್ಭವವಾಗುತ್ತದೆ. ಇಂಥ ವಿಚಾರಗಳನ್ನು ತೀರ್ಮಾನ ಮಾಡತಕ್ಕ ಜನರಿಗೂ, ಲಾಭ ಮಾಡಿಕೊಳ್ಳತಕ್ಕ ಮಧ್ಯವರ್ತಿ ಜನಗಳಿಗೂ ನಡುವೆ ಏನೋ ಸಂಬಂಧವಿನೆಯೆಂದು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಆದರೆ ಇನ್ನು ಮುಂದಾದರೂ ಇಂಥ ಪ್ರಕರಣಗಳಿಗೆ ಅವಕಾಶ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಜೊತೆಯಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಸದಸ್ಯರ ಅಭಿಪ್ರಾಯ ಹಾಗೂ ಸರ್ಕಾರದ ಅಭಿಪ್ರಾಯ ಈ ರೀತಿ ಇದೆಯೆಂದು ತಿಳಿಸುತ್ತೇವೆ ; ತಿಳಿಸುತ್ತಿದ್ದೇವೆ ಮತ್ತು ಮುಂದೆಯೂ ತಿಳಿಸುತ್ತೇವೆ. ಆದರೆ ಕೇಂದ್ರ ಸರ್ಕಾರದವರು ತಕ್ಷಣವೇ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಅಮೋನಿಯಂ ಸಲ್ಫೇಟ್ ಸಿಕ್ಕುತ್ತಿಲ್ಲ ಎಂದರೆ ನಾವಾಗಲಿ ಕೇಂದ್ರ ಸರ್ಕಾರವಾಗಲಿ ಏನೂ ಮಾಡುವುದಕ್ಕಾಗುವುದಿಲ್ಲ, ಅಂಥ ಅನಿವಾರ್ಯ ಪ್ರಸಂಗಗಳು ಬರುತ್ತವೆ.

ಶ್ರೀ ಹೆಚ್. ಡಿ. ದೇವೇಗೌಡ —ಇತ್ತೀಚೆಗೆ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿಯಾದಾಗ ಧಾರವಾಡದ ಜಿಲ್ಲಾಧಿಕಾರಿಯವರೇ ಧಾರವಾಡದ ಎಲ್ಲ ಪೆಟ್ರೋಲ್ ಬಂಕ್‌ಗಳಿಗೂ ಹೋಗಿ ಪ್ರತಿಯೊಂದು ಬಂಕ್‌ನಲ್ಲೂ ಎಷ್ಟೆಷ್ಟು ಸ್ಟಾಕ್ ಇದೆ ಎಂಬುದನ್ನು ಪರಿಶೀಲಿಸಿ ಅಷ್ಟನ್ನೂ ಹಳೆಯ ರೇಟಿಗೇ ಮಾರುವಂತೆ ಕ್ರಮ ತೆಗೆದುಕೊಂಡರು. ಆ ಅಧಿಕಾರಿ ಬಹಳ ದಕ್ಷತೆಯಿಂದ ಕೆಲಸಮಾಡಿದ್ದಾರೆ. ಅದರಂತೆ ತಾವೂ ಮನಸ್ಸು ಮಾಡಿದರೆ ವೈರ್‌ಲೆಸ್ ಮೆಸೇಜ್ ಕೊಟ್ಟು ಈ ಗೊಬ್ಬರದ ಸ್ಟಾಕ್ ಎಷ್ಟಿದೆ ಎಂಬುದನ್ನು ಪರಿಶೀಲಿಸಿ ಹಳೆಯ ರೇಟಿಗೇ ಮಾರಾಟ ಮಾಡಿಸಬಹುದು. ಆದರೆ ಅಧಿಕಾರಿಗಳೇ ವರ್ತಕರೊಡನೆ ಷಾಮಿಲಾದರೆ ಆಗ ನಾವೂ, ನೀವೂ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀನಿವಾಸ್‌ರವರು ಎತ್ತಿದ ಪ್ರಶ್ನೆಗೆ ನಾನು ಒಂದು ಉದಾಹರಣೆಯನ್ನು ಕೊಟ್ಟು ಹೇಳಿದೆ ಅದು ಕೇಂದ್ರ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಒಳಪಟ್ಟರಲಿ, ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಒಳಪಟ್ಟರಲಿ ನಾನು ಹೆಚ್ಚು ಆಳವಾಗಿ ಇದನ್ನು ಹೇಳುವುದಕ್ಕೆ ಹೋಗುವುದಿಲ್ಲ ಹಳೆಯ ಸ್ಟಾಕ್ ಮತ್ತು ಹೊಸ ಸ್ಟಾಕ್‌ನ ವಿಚಾರದಲ್ಲಿ ನಾನು ಈಗಾಗಲೇ ಏನು ಹೇಳಿದ್ದೇನೆ ಅದನ್ನು ಮಾಡುತ್ತೇನೆ. ಇದನ್ನು ಸರ್ಕಾರಕ್ಕೆ ಬಿಡಿ. ಒಟ್ಟಿನಲ್ಲಿ ಇವತ್ತು ಅಥವಾ

ನಾಳೆಯಲ್ಲಿ ನಮ್ಮ ತೀರ್ಮಾನ ಏನೆಂಬುದನ್ನು ತಮಗೆ ತಿಳಿಸುತ್ತೇನೆ. ಸ್ಟಾಕ್ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಸ್ಟಾಕ್‌ಗೆ ಸಂಬಂಧಪಟ್ಟಂತೆ ಆಂಕಿಅಂಶಗಳನ್ನು ಸದನದ ಮುಂದಿಟ್ಟಿದ್ದೇನೆ. ನಮಗೆ ಸಿಕ್ಕತಕ್ಕ ರಾಸಾಯನಿಕ ಗೊಬ್ಬರಗಳು ಯಾವುದು ಕಷ್ಟವಾಗಿದೆ ಎಂಬುದನ್ನೂ ಹೇಳಿದ್ದೇನೆ.

ಇನ್ನು ಈ ಗೊಬ್ಬರವನ್ನು ಆಮದು ಮಾಡಿಕೊಳ್ಳುವ ವಿಚಾರ ಕೇಂದ್ರ ಸರ್ಕಾರಕ್ಕೆ ಸಂಬಂಧ ಪಟ್ಟದ್ದು. ನಮ್ಮ ಹತ್ತಿರ ಸಿಕ್ಕುವಂಥ ಪದಾರ್ಥವಾದರೆ ನಾವು ಸ್ಟಾಕ್ ಇಡಬಹುದು. ಕೆಲವು ಪದಾರ್ಥಗಳಂತೂ ನಾವು ಎಷ್ಟೇ ಪ್ರಯತ್ನ ಪಟ್ಟರೂ, ಕೈ ಚಾಚಿದರೂ ನಮಗೆ ಎಟುಕುವುದಿಲ್ಲ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ಗೊಬ್ಬರ ವಿತರಣೆಯನ್ನು ಹೆಚ್ಚು ಮಾಡುವ ಬಗ್ಗೆ ಮತ್ತು ರೇಟ್ಸ್‌ನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರವನ್ನು ನಾವು ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಈ ವರ್ಷಕ್ಕೆ ಬೇಕಾಗುವಷ್ಟು ಸ್ಟಾಕ್ ನಿಮ್ಮಲ್ಲಿದೆಯೇ ? ಎಂದು ಕೆಲವು ಸದಸ್ಯರು ಪ್ರಶ್ನೆ ಮಾಡಿದ್ದಾರೆ. ಅದಕ್ಕೆ ನಾನಾದರೂ ಹೇಳುವುದಿಷ್ಟೆ. ಈ ವರ್ಷಕ್ಕೆ ಬೇಕಾಗುವಷ್ಟು ಸ್ಟಾಕ್ ನಮ್ಮಲ್ಲಿದೆ. ಇದರ ಬಗ್ಗೆ ಸದಸ್ಯರಿಗೆ ಅನುಮಾನವೇ ಬೇಡ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ರಾಜಶೇಖರ್‌ರವರು ಮಾತನಾಡುತ್ತಾ ಜಪಾನ್‌ನಲ್ಲಿ ೩೦೦-೪೦೦ ರೂ. ಕೊಟ್ಟು ತೆಗೆದುಕೊಳ್ಳುವಷ್ಟು ಶಕ್ತಿ ಇದೆಯೆಂದು ಹೇಳಿದ್ದಾರೆ. ಅದನ್ನು ಇನ್ನೊಂದು ದಿವಸ ಮಾತನಾಡೋಣ.

ಇನ್ನು ಮಾನ್ಯ ಶಿವನಂಜಪ್ಪನವರು ಮಾತನಾಡುತ್ತಾ ಈ ಗೊಬ್ಬರವನ್ನು ಉಪಯೋಗ ಮಾಡಿ ಎಂದು ಪ್ರಚಾರ ಮಾಡಿದವರು ಸರ್ಕಾರದವರು ಅವರು ಉಪಯೋಗ ಮಾಡಿ ಎಂದು ಹೇಳಿರುವುದರಿಂದ ನಾವು ಉಪಯೋಗ ಮಾಡಬೇಕಾಗುತ್ತದೆ; ಷಾರ್ಟೇಜ್ ಬಂದರೆ ಏನು ಮಾಡಬೇಕು.....

ಶ್ರೀ ಜಿ. ಎಸ್. ಶಿವನಂಜಪ್ಪ.—ಈ ಗೊಬ್ಬರವನ್ನು ಗದ್ದೆಗಳಿಗೆ ಹಾಕಿದರೆ ಒಂದು ಗೇಣು ಕೂಡ ಪೈರು ಬೆಳೆಯುವುದಿಲ್ಲ. ಈ ಸಾರಿ ಇದನ್ನು ಉಪಯೋಗ ಮಾಡಿದರೆ ಮುಂದಿನ ವರ್ಷ ಮಾನ್ಯ ಸಚಿವರಾದ ಇಬ್ರಾಹಿಂರವರೇ ಸರ್ಕಾರದ ಪರವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ಏಕೆಂದರೆ ನಾನು ೧೦ ಎಕರೆಯಲ್ಲಿ ಬೇಸಾಯ ಮಾಡುತ್ತೇನೆ. ನೀವು ೧೮ ಕೆ.ಜಿ. ಯೂರಿಯಾವನ್ನು ಕೊಟ್ಟರೆ ಅದು ನನ್ನ ಜಮೀನಿಗೆ ಸಾಕಾಗುತ್ತದೆಯೆ ?

ಶ್ರೀ ಎಸ್. ಬಂಗಾರಪ್ಪ.—ಬೆಲೆ ಕಡಿಮೆಯಾಗುತ್ತದೆ ಎಂದು ಉದ್ಯೋಗ ಮಾಡುತ್ತಿದ್ದಾರೆ. ಪದೇ ಪದೇ ನಮ್ಮ ಇಲಾಖೆಯವರು ಹೇಳುತ್ತಿದ್ದಾರೆ ಮತ್ತು ಪ್ರಚಾರ ಮಾಡುತ್ತಿದ್ದಾರೆ.....

ಶ್ರೀ ಜಿ.ಎಸ್ ಶಿವನಂಜಪ್ಪ.—ನಮಗೆ ಗೊಬ್ಬರದ ಕೊರತೆಯಿಲ್ಲ ಎಂದು ಹೇಳುತ್ತಿದ್ದಾರೆ ಆದರೆ ಸೊಸೈಟಿಗಳಲ್ಲಿ ಇಂಡೆಂಟ್ ಮಾಡಲಿಲ್ಲ, ಇದರಿಂದ ರೈತನಿಗೆ ೧೪೦ರಿಂದ ೧೮೦ಕ್ಕೆ ಮಾರುತ್ತಾರೆ. ಮತ್ತೆ ಲೆವ್ವಿ ವಸೂಲು ಮಾಡುತ್ತಿದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ನಾವು ಹೇಳಿದ್ದೇವೆ ಸ್ಟಾಕ್ ಇದೆ, ಜನ ಉಪಯೋಗ ಮಾಡುತ್ತಿದ್ದಾರೆ. ಒಟ್ಟಾರೆ ಗೊಬ್ಬರದ ಪರಿಸ್ಥಿತಿ ಚೆನ್ನಾಗಿದೆ. ಇನ್ನು ಹಳೆ ರೇಟು ಮತ್ತು ಹೊಸ ರೇಟು ಇದನ್ನು ಅಂತಿಮವಾಗಿ ಇವತ್ತು ನಾಳೆಯಲ್ಲಿ ಚರ್ಚೆ ಮಾಡಿ ಬಗೆಹರಿಸುತ್ತೇವೆ. ಸಬ್ಸಿಡಿ ವಿಷಯ ನಾವು ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಅದರ ಮೇಲೆ ಒತ್ತಡ ತರುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟ ರೀತಿಯಲ್ಲಿ ಗೊಬ್ಬರದ ಕೊರತೆಯಿಲ್ಲವೆಂದು ಹೇಳುತ್ತಿದ್ದಾರೆ ಮತ್ತು ಜಿಲ್ಲೆಯವರು ವಿವರಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ ಆದರೆ ಭತ್ತ ರಾಗಿ ಇವೆಲ್ಲವನ್ನೂ ದಾಮಾಶ ಇಷ್ಟು ಎಂದು ಸಂಗ್ರಹಿಸಿರಬಹುದು. ಎಷ್ಟು ಬೆಲೆ ಮತ್ತು ಎಕ್ಸ್ ಪೆಂಡೀಚರ್ ಷುಗರ್‌ಕೇನ್ ಮುಂತಾದವಕ್ಕೆ ಇಷ್ಟು ಉಪಯೋಗಿಸಬೇಕು ಇದನ್ನು ಕಂಟ್ರೋಲ್ ಮಾಡಿಲ್ಲ. ರೈತನಿಗೆ ತೊಂದರೆ ತಪ್ಪಿಲ್ಲ. ಆದರೆ ಮಂತ್ರಿಗಳು ಏನು ಹೇಳಿದ್ದಾರೆ ಅದು ರಿಕಾರ್ಡ್ ಆಗಿ ಹೋಗುತ್ತದೆ. ಆದರೆ ಆಹಾರದ ಕೊರತೆಯಿಲ್ಲ ಎಂದರೆ ಒಪ್ಪಬಹುದು. ಆದರೆ ಗೊಬ್ಬರದ ಕೊರತೆ ಇಲ್ಲ ವೆಂದರೆ ನಮಗೆ ನಂಬಿಕೆಯಿಲ್ಲ, ಯಾವ ದಾಮಾಶ ರೈತನು ಕೇಳುವಷ್ಟು ಕೊಡಬೇಕಾಗುತ್ತದೆ. ಸ್ಟಾಕ್

ಇಟ್ಟುಕೊಂಡು ಇರುವುದಕ್ಕೆ ಅದರ ವಿವರಗಳನ್ನು ಹೇಳಿದರೆ ನಾವು ಒಪ್ಪಬಹುದು. ಅಗ್ರಿಕಲ್ಚರ್ ಇಲಾಖೆ ಅಧಿಕಾರಿಗಳು ಕೊಆಪರೇಟಿವ್ ಏಜೆನ್ಸಿ ಮೂಲಕ ಕೊಡುವಾಗ ವಿಫಲರಾಗಿದ್ದಾರೆ ಸಾಕಷ್ಟು ಸ್ಟಾಕ್ ಗೊಬ್ಬರ ಇದ್ದರೆ ರೈತರು ಕೇಳುವಷ್ಟು ಏತಕ್ಕೆ ಕೊಡಲಾರರು ಎಂದು ಕೇಳುತ್ತೇನೆ.

ಛೇರ್‌ಮನ್.—ಮಾನ್ಯ ಸದಸ್ಯರು ಹೇಳುವುದನ್ನು ಗಮನದಲ್ಲಿಟ್ಟು ತಾವು ಈ ವಿಚಾರವನ್ನು ಚರ್ಚೆ ಮಾಡುವಾಗ ಗಣನೆಗೆ ತೆಗೆದುಕೊಳ್ಳಬೇಕು.

(ii) re ; Scarcity of Chemical Mannures in Hassan District

SRI K. H. HANUMEGOWDA.—Sir, I would like to call the attention of the Minister for Agriculture regarding scarcity of Chemical mannures in Hassan District.

SRI S. BANGARAPPA.—(Minister for Agriculture) Sir, I would like to make the following statement.

Except for Ammonium Sulphate, there is no shortage of fertiliser in the State. As Ammonium Sulphate is imported and allotted to the State by Government of India, the quantity of Ammonium Sulphate available is restricted to the quantity allotted by Government of India. To some extent, complexes such as 17: 17 :17 and 19: 19: 19 are also in short supply because of difficulty in transporting these complex fertilisers into Karnataka due to nonavailability of railway wagons for this purpose. There are adequate stocks of Di-ammonium Phosphate, Urea, Calcium Ammonium Nitrate, Muriate of potash and single Super Phosphate in the State at present and a combination of these fertilisers can be utilised in place of complex fertilisers. The Karnataka Agro Industries Corporation and Karnataka State Co-operative Marketing Federation have been directed to stock enough quantities of DAP, Urea. Muriate of Potash and single Super Phosphate at Hassan. As on 1-6-1980, 3265 tonnes of fertilisers have been stored in Hassan District.

As per Government of India telegram dated 8-6-80, the sale of Ammonium Sulphate and Calcium Ammonium Nitrate has been suspended untill further instructions pending revision of price. The Karnataka Agro Industries Corporation and Karnataka State Co-operative Marketing Federation which had suspended the sale of other fertilisers for a day or two pending the announcement of revised prices by Government of India and have now commenced their sales.

ಶ್ರೀ ಕೆ.ಎಚ್., ಹನುಮೇಗೌಡ (ಹಾಸನ).—ಅಧ್ಯಕ್ಷರೆ, ೧-೬-೧೯೮೦ರಲ್ಲಿ ೩೨೬೫ ಮೂಟೆ ಫರ್ಟಿಲೈಸರ್ ಹಾಸನದಲ್ಲಿ ಸ್ಟಾಕ್ ಇದೆ ಎಂದು ಹೇಳುತ್ತಾರೆ, ಸುಮಾರು ೨೦ ದಿವಸಗಳಿಂದ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಒಂದು ಕಡೆ ಕೂಡ ಸ್ಟಾಕ್ ಇಲ್ಲವೆಂದು ಅನೇಕ ಜನ ರೈತರು ಎಲ್ಲಾ ಸೊಸೈಟಿಗಳಿಗೂ ಅಲೆದು ವಾಪಸ್ ಹೋಗಿದ್ದಾರೆ. ಆದರೆ ಮಾನ್ಯ ಸಚಿವರು ಹೇಳುತ್ತಿದ್ದಾರೆ ಸ್ಟಾಕ್ ಇತ್ತು ಎಂದು, ಇದು ಸತ್ಯಕ್ಕೆ ದೂರವಾದ ವಿಚಾರವೆಂದು ತಿಳಿಸಿ